ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 14 | ಏಪ್ರಿಲ್ 6, 1980 | 40 ಪೈಸೆ

ಮುಖ್ಯಮಂತ್ರಿಗೆ ಛೀಮಾರಿ !

ರಾಜ್ಯದ ಮುಖ್ಯಮಂತ್ರಿ ಶ್ರೀ ಗುಂಡೂರಾಯರು ತಾವು ರಾಜ್ಯದ ಮುಖ್ಯ ಮಂತ್ರಿಯೆಂಬುದನ್ನೂ, ಎಲ್ಲರ ಹಿತವನ್ನೂ ರಕ್ಷಣೆಮಾಡುವ ಜವಾಬ್ದಾರಿ ತನ್ನ ಮೇಲಿದೆಂಬುದನ್ನೂ ಮರೆತು ಕೆಲವು ಸಮಯ "ಮಣ್ಣಿನ ಮಕ್ಕಳ" ವಾದವನ್ನು ಬಹಳ ಉತ್ಸುಕತೆಯಿಂದ ಪ್ರತಿಪಾದಿಸಿರುತ್ತಾರೆ. ಇದರಿಂದಾಗುವ ಅಪಾಯದ ಬಗ್ಗೆ ನಾವು ಹಿಂದೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಅವರ ವಾದವನ್ನು ಉಪಯೋಗಿಸಿಕೊಂಡು ಕೆಲವು ಸಮಾಜ ವಿರೋಧಿ ಶಕ್ತಿಗಳು ಹಲವು ಕಡೆ ಗಲಭೆಯನ್ನೂ ನಡೆಸಿದ್ದುಂಟು. ಕೆಲವು ಕೈಗಾರಿಕೆಗಳಲ್ಲಿ ಈ ವಾದವನ್ನು ಮುಂದೂಡಿ ಕೆಲ ಸ್ವಾರ್ಥಿಗಳಿಂದ ಕಾರ್ಮಿಕರ ಐಕ್ಯತೆಯನ್ನೂ ಒಡೆಯಲು ಸಹ ಯೋಜನೆ ನಡೆದಿತ್ತು. ಆದರೆ ಈಗ ಕಾಂಗ್ರೆ ಅಧ್ಯಕ್ಷರೂ, ಭಾರತದ ಪ್ರಧಾನ ಮಂತ್ರಿಯುವರೂ ಆದ ಶ್ರೀಮತಿ ಇಂದಿರಾಗಾಂಧಿಯವರೇ ಈ ವಾದವನ್ನು ವಿರೋಧಿಸಿ ಮಾತನಾಡಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದೂ, ದೇಶದ ತೀವ್ರ ಅಭಿವೃದ್ಧಿಗೆ ಇದು ಹಾನಿಕರವಾದುದೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ದೇಶದ ವ್ಯವಸಾಯ ಮತ್ತು ಕೈಗಾರಿಕಾಭಿವೃದ್ಧಿಗೆ ಕಾಂಗ್ರೆಸ್ ಅನುಸರಿಸುವ ಬಂಡವಾಳ

ಸಂಪಾದಕೀಯ

ಶಾಹಿ ಪಥದ ದಿವಾಳಿಕೋರ ಧೋರಣೆಯಿಂದ ಸಾಧ್ಯವಿಲ್ಲವೆಂಬುದು ಮೂರು ದಶಕಗಳ ಕಾಂಗ್ರೆಸ್ ಆಡಳಿತೆಯಿಂದ ಸ್ಪಷ್ಟವಾಗಿದೆ. ನಿರುದ್ಯೋಗ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜದಲ್ಲಿ ಮೂಲಭೂತ ಬದಲಾವಣೆ ಬರಬೇಕಾಗಿದೆ. "ಮಣ್ಣಿನ ಮಕ್ಕಳಿ"ಗೇ ಕೆಲಸವೆಂಬ ವಾದದಲ್ಲಿ ಹುರುಳಿಲ್ಲವೆಂದೂ, ಅದರಿಂದ ದೇಶದ ಐಕ್ಯತೆಗೆ ಧಕ್ಕೆ ಬರುತ್ತದೆಂದೂ ಶ್ರೀಮತಿ ಇಂದಿರಾರವರು ಹೇಳಿದ ಮೇಲೆ ಶ್ರೀ ಗುಂಡೂರಾಯರ ಗತಿ ಏನು ?

ಕರ್ನಾಟಕದ ಮುಖ್ಯಮಂತ್ರಿಯುವರೇ 'ಪೋಲೀಸ್' ಇಲಾಖೆಯ ಮಂತ್ರಿಯುವರೂ ಆಗಿದ್ದಾರೆ. ಆದರೆ ದಿನ ಬೆಳಗಾದರೆ ಪೋಲೀಸ್ ಅತ್ಯಾಚಾರಗಳ ಸುದ್ದಿಗಳು ಪತ್ರಿಕೆಗಳಲ್ಲಿ ಬರುತ್ತಿವೆ. ಬೆಂಗಳೂರಲ್ಲಿ ಸುಜಾತಾ ಎಂಬವಳು ತನ್ನ ಗೆಳತಿಯ ಮೇಲೆ ನಡೆದ ಹಲ್ಲೆಯ ಬಗ್ಗೆ ದೂರು ಕೊಡಲು ಪೋಲೀಸ್ ಠಾಣೆಗೆ ಹೋದಾಗ ಅವಳನ್ನು ಅಧಿಕಾರಿಗಳು ಎಳೆದುಕೊಂಡು ಹೋಗಿ ಕೋಣೆಯೊಳಗೆ ಹಾಕಿ, ಅವಳ ಕೈಗಳನ್ನು ಹಗ್ಗದಲ್ಲಿ ಕಟ್ಟಿ, ತಲೆ ಬೋಳಿಸಿ, ಚೆನ್ನಾಗಿ ಥಳಿಸಿ ಬಿಟ್ಟಿದ್ದಾರೆಂದು ವರದಿ ಬಂದಿದೆ. ಮಾಲೂರಿನಲ್ಲಿ ಒಬ್ಬ ಹರಿಜನ ಹೆಂಗಸಿನ ಮೇಲೆ ಹಿಂದೆ ಅತ್ಯಾಚಾರ ನಡೆದಿದ್ದು ಈಗ ಅವಳ ಗಂಡನನ್ನೂ ಕೊಲೆಮಾಡಿ

(ಕಡೆಯ ಪುಟ ನೋಡಿ)

ಏಪ್ರಿಲ್ ೨೧ರಂದು ಅಖಿಲಭಾರತ ದಿನಾಚರಣೆಗೆ ಸಿಐಟಿಯು ಕರೆ

ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಯು ಮಾರ್ಚ್ 21ರಿಂದ 23 ರವರೆಗೆ ನವದೆಹಲಿಯಲ್ಲಿ ಕಾಂ. ಬಿ. ಟಿ. ರಣದಿವೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಇಂದು ಕಾರ್ಮಿಕವರ್ಗ ಹಾಗೂ ನಮ್ಮ ದೇಶವನ್ನು ಬಾಧಿಸುತ್ತಿರುವ ಐದು ಮುಖ್ಯ ವಿಷಯಗಳಾದ-ಸರ್ವಾಧಿಕಾರ ತಲೆ ಎತ್ತುತ್ತಿರುವುದು, ಅಗತ್ಯ ವಸ್ತುಗಳ ಬೆಲೆಏರಿಕೆ, ಬೆಳೆಯುತ್ತಿರುವ ನಿರುದ್ಯೋಗ, ಕೇಂದ್ರ-ರಾಜ್ಯ ಬಾಂಧವ್ಯ ಬಿಗಡಾಯಿಸುತ್ತಿರುವುದು, ಭಾರತ ಉಪಖಂಡದಲ್ಲಿ ಸಾಮ್ರಾಜ್ಯಶಾಹಿಯ ಪಿತೂರಿ-ಇವುಗಳ ಬಗ್ಗೆ ಜನತೆಯನ್ನು ಎಚ್ಚರಿಸುವುದಕ್ಕೆ ಮತ್ತು ಸಾರ್ವಜನಿಕರ ಗಮನ ಸೆಳೆಯಲು ಏಪ್ರಿಲ್ 21 ರಂದು ಸಿ. ಐ. ಟಿ. ಯುಗೆ ಸೇರಿರುವ ಎಲ್ಲಾ ಕಾರ್ಮಿಕ ಸಂಘಗಳು ದೇಶಾದ್ಯಂತ 'ಅಖಿಲ ಭಾರತ ದಿನ'ವನ್ನು ಆಚರಿಸಬೇಕೆಂದು ಕಾರ್ಯಕಾರಿ ಸಮಿತಿಯು ಕರೆಕೊಟ್ಟಿದೆ. ಈ ದಿನವನ್ನು ಯಶಸ್ವಿಯಾಗಿ ಆಚರಿಸಲು ಸಹಕರಿಸಬೇಕೆಂದು ಸಿ. ಐ. ಟಿ. ಯು. ಎಲ್ಲಾ ಕಾರ್ಮಿಕ ಸಂಘಗಳಿಗೆ ಮನವಿಮಾಡಿಕೊಂಡಿದೆ.

ಒಂಬತ್ತು ರಾಜ್ಯಗಳ ವಿಧಾನಸಭೆಗಳನ್ನು ಮತ್ತು ದೆಹಲಿಯ ಮೆಟ್ರೊಪೋಲಿಟನ್ ಕೌನ್ಸಿಲನ್ನು ಅನ್ಯಾಯವಾಗಿ ವಿಸರ್ಜನೆ ಮಾಡಿದುದು, ಸ್ಥಾನಬದ್ಧತಾ ಕಾಯಿದೆಯನ್ನು ಮತ್ತೆ ತಂದಿರುವುದು, ತುರ್ತುಪರಿಸ್ಥಿತಿಯ ಕಾಲದಲ್ಲಿ ಅಮಾನುಷ ದುಷ್ಕೃತ್ಯಗಳನ್ನು ಎಸಗಿದ ಅಧಿಕಾರಿಗಳನ್ನು ಮೇಲೆ ತಂದಿರುವುದು, ಸಂಜಯ ಗಾಂಧಿಯು ದುಷ್ಪಕೂಟವು ಚುರುಕಾದಿರುವುದು ಇತ್ಯಾದಿ ಶ್ರೀಮತಿ ಇಂದಿರಾ ಗಾಂಧಿಯವರು ಅಧಿಕಾರವಹಿಸಿಕೊಂಡ ನಂತರ ತೆಗೆದುಕೊಂಡಿರುವ ಕ್ರಮಗಳನ್ನು ಅವಲೋಕಿಸಿದ ಕಾರ್ಯಕಾರಿ ಸಮಿತಿಯು ಸರ್ವಾಧಿಕಾರಿ-ಅಧಿಕಾರಶಾಹಿ ಶಕ್ತಿಗಳ ವಿರುದ್ಧ ನಡೆಯುವ ಹೋರಾಟದಲ್ಲಿ ಚುನಾವಣಾ ಹೋರಾಟದಲ್ಲಿ ಈ ಶಕ್ತಿಗಳನ್ನು ಹಿಮ್ಮೆಟ್ಟಿಸುವ ಪ್ರಯತ್ನದಲ್ಲಿ ಕ್ರಿಯಾಶೀಲ ಪಾತ್ರವನ್ನು ವಹಿಸಬೇಕೆಂದು ಕಾರ್ಮಿಕವರ್ಗಕ್ಕೆ ಕರೆಕೊಟ್ಟಿದೆ.

ವಾಮಪಂಥೀಯರ ನೇತೃತ್ವದಲ್ಲಿರುವ ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯ ಸರ್ಕಾರಗಳನ್ನು ಅಭಿನಂದಿಸಿದ ಸಭೆಯು ಈ ಸರ್ಕಾರಗಳ ಸಾಧನೆಗಳನ್ನು ಇಡೀ ದೇಶದಲ್ಲಿ ಎಲ್ಲಾ ಕಾರ್ಮಿಕರ ನಡುವೆ ಜನಪ್ರಿಯಗೊಳಿಸಬೇಕೆಂದು ಕಾರ್ಮಿಕವರ್ಗಕ್ಕೆ ಕರೆಕೊಟ್ಟಿದೆ.

(ಕಡೆಯ ಪುಟ ನೋಡಿ)

ದುರಂತ ತಪ್ಪಿಸಲು ದಯವಿಟ್ಟು ಒಂದಾಗಿ

ಮುಂಬರುವ ದಿನಗಳಲ್ಲಿ ಇಂದಿರಾಗಾಂಧಿ ನೇತೃತ್ವದ ಸರ್ವಾಧಿಕಾರಿ ಶಕ್ತಿಗಳಿಂದ ರಾಷ್ಟ್ರಕ್ಕೆ ಕೇಡುಕು ಕಟ್ಟಿಟ್ಟಬುತ್ತಿ. ಈ ಮಹಾ ದುರಂತದಿಂದ ದೇಶದ ಜನತೆಯನ್ನು ರಕ್ಷಿಸಲು ದಯವಿಟ್ಟು ಎಲ್ಲರೂ ಒಗ್ಗಟ್ಟಾಗಿ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಅವರು ಆರ್. ಎಸ್. ಎಸ್. ಜನಸಂಘೇತರ ಎಲ್ಲ ವಿರೋಧ ಪಕ್ಷಗಳ ನಾಯಕರಿಗೆ ಕಳಕಳಿಯ ಮನವಿ ಮಾಡಿಕೊಂಡರು.

ಬೆಂಗಳೂರು ಜಿಲ್ಲಾ ಸಿ. ಪಿ. ಐ. (ಎಂ) ಸಮಿತಿಯುವರು ಮಾರ್ಚ್ 30ರಂದು ಬೆಂಗಳೂರಿನ ಚಿಕ್ಕಲಾಲ್ ಬಾಗಿನಲ್ಲಿ ಏರ್ಪಡಿಸಿದ್ದ ಬೃಹತ್ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಕಾಂ. ಇ. ಎಂ. ಎಸ್. ಮಾತನಾಡುತ್ತಿದ್ದರು.

ಕಳೆದ ಎರಡುವರೆ ತಿಂಗಳಿನ ಇಂದಿರಾಗಾಂಧಿಯುವರ ಆಡಳಿತ ನೋಡಿದರೆ ಅವರು ತುರ್ತುಪರಿಸ್ಥಿತಿ ಸಮಯದಲ್ಲಿ ಎಲ್ಲ ಅಸ್ತ್ರಗಳನ್ನೂ ಈ ದೇಶದ ಜನತೆಯ ಮೇಲೆ ಮತ್ತೆ ಬಳಸುತ್ತಾರೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ ಎಂದ ಇ.ಎಂ.ಎಸ್. ಅವರು, ರಾಷ್ಟ್ರವನ್ನು ಈ ಸಂಕಷ್ಟದಿಂದ ಪಾರುಮಾಡಲು ಎಲ್ಲ ವಿರೋಧ ಪಕ್ಷಗಳೂ ಒಂದಾಗಿ ಎಂದು ಮತ್ತೆ ಮತ್ತೆ ಮನವಿ ಮಾಡಿದರು.

ಕೇರಳ ರಾಜ್ಯದಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ನೊಡನೆ ನೇರವಾಗೇ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದ ಆರ್.ಎಸ್.ಎಸ್. ಹಿಡಿತದ ಜನಸಂಘೀಯರು ವಿರೋಧ ಪಕ್ಷಗಳೊಟ್ಟಿಗೆ ಬರುವುದು ಬೇಡ ಎಂದು ಇ.ಎಂ.ಎಸ್. ಹೇಳಿದರು. ಅಖಿಲ ಭಾರತ ಮಟ್ಟದಲ್ಲೂ ಇಂದಿರಾಗಾಂಧಿಯವರೊಡನೆ ಸಹಕರಿಸುತ್ತೇವೆ ಎಂಬ ಆರ್.ಎಸ್.ಎಸ್. ನಾಯಕ ಬಾಳಾಸಾಹೇಬ್ ದೇವರಸ್ ಅವರ ಸಾರ್ವಜನಿಕ ಹೇಳಿಕೆಯನ್ನು ಪ್ರಸ್ತಾಪಿಸಿದ ನಂಬೂದಿರಿಪಾದ್ ಅವರು ಇಂಥಹ ಆರ್. ಎಸ್. ಎಸ್. ನೊಂದಿಗೆ ಪ್ರಜಾಪ್ರಭುತ್ವವಾದಿಗಳ ಸಹಕಾರ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಆದ್ದರಿಂದ ಅರಸು ನೇತೃತ್ವದ

ಇ. ಎಂ. ಎಸ್. ಮನವಿ

ಕಾಂಗ್ರೆಸ್ ಪಕ್ಷ. ಜಗಜೀವನ್‌ರಾಮ್ ನೇತೃತ್ವದ ಜನತಾ ಪಕ್ಷ, ಚಂದ್ರಶೇಖರ್ ನೇತೃತ್ವದ ಜನತಾ ಪಕ್ಷ, ಚರಣ ಸಿಂಗ್ ನೇತೃತ್ವದ ಲೋಕದಳ, ರಾಜ್ ನಾರಾಯಣ್ ನೇತೃತ್ವದ ಲೋಕದಳ, ಅಕಾಲಿ ದಳ, ಅಣ್ಣಾ ಡಿ. ಎಂ. ಕೆ. ಮತ್ತು ಎಲ್ಲ ವಾಮಪಂಥೀಯರೂ ಒಂದಾಗಿ ಸರ್ವಾಧಿಕಾರಿ ಶಕ್ತಿಯನ್ನು ಎದುರಿಸಲು ಮುಂದಾಗಬೇಕು ಎಂದು ಕರೆ ಕೊಟ್ಟರು.

ಲೋಕಸಭಾ ಚುನಾವಣೆಯ ನಂತರದ ರಾಜಕೀಯ ಪರಿಸ್ಥಿತಿಯನ್ನು ವಿವರವಾಗಿ ವಿಶ್ಲೇಶಿಸಿದ ಮಾರ್ಕ್ಸ್‌ವಾದಿ ನಾಯಕರು ಇಂದಿರಾಗಾಂಧಿ ಮತ್ತೆ ಅಧಿಕಾರಕ್ಕೆ ಬಂದದ್ದು ದೇಶಕ್ಕೆ ಕೆಟ್ಟದಾಯಿತೆಂದರು. 1977ರಲ್ಲಿ ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸಲು ಶಕ್ಯವಾಗಿದ್ದ ಜನತಾ ಪಕ್ಷವು ಒಡೆದು 5 ತುಂಡುಗಳಾಗಿರುವುದು ಅತ್ಯಂತ ದುರಾದೃಷ್ಟಕರ ಎಂದು ಇ. ಎಂ. ಎಸ್. ನುಡಿದರು.

ಕಳೆದ ಚುನಾವಣೆಯಲ್ಲಿ ತಮ್ಮ ಪಕ್ಷವು ಮಾರ್ಗ ತೋರಿಸಿದ್ದಂತೆ ಇಂದಿರಾ ಕಾಂಗ್ರೆಸ್ ಹಾಗೂ ಜನಸಂಘ-ಆರ್. ಎಸ್. ಎಸ್.ನ್ನು ವಿರೋಧಿಸುವ ಎಲ್ಲರೂ ಒಗ್ಗಟ್ಟಾಗಿ ಹೋರಾಡಿದ್ದರೆ ಇಂದಿರಾಗಾಂಧಿಯು ಅಧಿಕಾರಕ್ಕೆ ಬರುತ್ತಲೇ ಇರಲಿಲ್ಲ ಎಂದು ಹೇಳಿದ ಕಾಂ. ಇ. ಎಂ. ಎಸ್., ಈಗಲೂ ಮುಂಬರುವ 9 ರಾಜ್ಯಗಳ ಚುನಾವಣೆಯಲ್ಲಿ ಒಗ್ಗಟ್ಟಾಗಿ ಹೋರಾಡಿದರೆ ಇಂದಿರಾ-ಆರ್. ಎಸ್. ಎಸ್ಸಿಗರ ಸೋಲು ಖಚಿತ ಎಂದು ಅಭಿಪ್ರಾಯಪಟ್ಟರು.

ಬೆಲೆಏರಿಕೆ :

ಸಕ್ಕರೆಯ ಬೆಲೆ, ಬಂಗಾರದ ಬೆಲೆ ಇಳಿಸುವ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರ ಬೆಲೆ ಇಳಿಸುವ ಬದಲು ಏರಿಸಲು ಮುಂದಾಯಿತು ಎಂದು ಟೀಕಿಸಿದ ಇ. ಎಂ. ಎಸ್., ನಿರುದ್ಯೋಗ ನಿವಾರಿಸಲು ಈ ಸರ್ಕಾರ ಯಾವುದೇ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡಿಲ್ಲ ಎಂದು ವಿಷಾದಿಸಿದರು.

(ಕಡೆಯ ಪುಟ ನೋಡಿ)

ಕೆಲಸದಿಂದ ವಜಾಮಾಡಲ್ಪಟ್ಟ ಕಾರ್ಮಿಕ ಮುಖಂಡರನ್ನು ಪುನರ್ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿ ಸಂಸೆ ಟೀ ಎಸ್ಟೇಟ್ ಕಾರ್ಮಿಕರ ಮುಷ್ಕರ

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಳಸಹೋಬಳಿಯಲ್ಲಿ ಏಕ ಸ್ವಾಮ್ಯಸ್ಥ ಬಂಡವಾಳಗಾರಭಾಂಗೂರ್ ಕುಟುಂಬದ ಹತೋಟಿಯಲ್ಲಿರುವ ಕಳಸ ಟೀ ಅಂಡ್ ಪ್ರಾಡಕ್ಟ್ಸ್ ಕಂಪೆನಿಯ ಒಡೆತನದಲ್ಲಿರುವ ಗುಮ್ಮನ ಕಾನು ಮತ್ತು ಸಂಸೆ ಟೀ ತೋಟಗಳಿವೆ. ಖಾಯಂ, ಹಂಗಾಮಿ ಮತ್ತು ಚಂಗೂಲಿ ಕೆಲಸಗಾರರೆಲ್ಲರೂ ಸೇರಿದಂತೆ ಈ ಎರಡು ತೋಟಗಳಲ್ಲಿ ಸುಮಾರು 1,000 ಕಾರ್ಮಿಕರು ದುಡಿಯುತ್ತಿದ್ದಾರೆ.

ಎಲ್ಲಾ ಹಂಗಾಮಿ ಮತ್ತು ಚಂಗೂಲಿ ಕಾರ್ಮಿಕರನ್ನು ಖಾಯಂ ಮಾಡಬೇಕು ಮತ್ತು ಇತರ ಬೇಡಿಕೆಗಳಿಗಾಗಿ ಸಂಸೆ ಎಸ್ಟೇಟ್ ಕಾರ್ಮಿಕರು ಚಳುವಳಿಯ ಹಾದಿಯನ್ನು ಹಿಡಿಯುತ್ತಿದ್ದ ಹಿನ್ನೆಲೆಯಲ್ಲಿ ಡಿಸೆಂಬರಿನಲ್ಲಿ ನಡೆದ ಯಾವುದೋ ಘಟನೆಯ ಆಧಾರದ ಮೇಲೆ ಆಡಳಿತ ಮಂಡಳಿಯು ಕಾರ್ಮಿಕ ಸಂಘದ ಸಂಸೆ ಎಸ್ಟೇಟ್ ಕಮಿಟಿ ಅಧ್ಯಕ್ಷ ಮುನಿಯಾಂಡಿಯವರನ್ನು ತಾ॥ 18-3-1980ರಿಂದ ಕೆಲಸದಿಂದ ವಜಾ ಮಾಡಿ ಇತರ ಮೂವರನ್ನು ಅಮಾನತುಗೊಳಿಸಿತು.

ಈ ಆಜ್ಞೆಗಳನ್ನು ವಿರೋಧ ಮಾಡಿ 18ರಿಂದ ಸಂಸೆ ಎಸ್ಟೇಟ್ ಕಾರ್ಮಿಕರು ಮುಷ್ಕರ ಪ್ರಾರಂಭಿಸಿದರು. 20ರಂದು ಸಂಸೆ ಎಸ್ಟೇಟ್ ಆಫೀಸಿನಲ್ಲಿ ನಡೆದ ಮಾತುಕತೆಯಲ್ಲಿ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷ ಎ. ಕೆ. ವಿಶ್ವನಾಥ, ಉಪಕಾರ್ಯದರ್ಶಿ ಕೆ. ಸುಕುಮಾರ್, 21ರಂದು ಚಿಕ್ಕಮಗಳೂರಿನ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ನಿನ ಆಫೀಸಿನಲ್ಲಿ ನಡೆದ ಮಾತುಕತೆಯಲ್ಲಿ ಸಿ. ನಂಜುಂಡಪ್ಪ, ಎ. ಕೆ. ವಿಶ್ವನಾಥ್ ಮತ್ತು ಕೆ. ಸುಕುಮಾರ್ ಭಾಗವಹಿಸಿದ್ದರು.

22 ಮತ್ತು 23ರಂದು ಗುಮ್ಮನಕಾನು ಎಸ್ಟೇಟ್ ಆಫೀಸಿನಲ್ಲಿ ಚಿಕ್ಕಮಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರ್ ನಡೆಸಿದ ವಿಚಾರಣೆಯಲ್ಲಿ ಉಪಾಧ್ಯಕ್ಷ ಎ. ಸಿ. ಕೇಶವರು ಕಾರ್ಮಿಕರನ್ನು ಪ್ರತಿನಿಧಿಸಿದ್ದರು.

ಕಳಸದಲ್ಲಿ ಪಂಜಿನ ಮೆರವಣಿಗೆ

23ರ ರಾತ್ರಿ 8 ಗಂಟೆಗೆ ಸಂಸೆ ಎಸ್ಟೇಟ್ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಸುಮಾರು 350 ಕಾರ್ಮಿಕರು ಕಳಸದ ಪ್ರಮುಖ ಬೀದಿಗಳಲ್ಲಿ ಪಂಜಿನ ಮೆರವಣಿಗೆ ನಡೆಸಿದರು. ಮೆರವಣಿಗೆಯ ನಂತರ ನಡೆದ ಸಭೆಯಲ್ಲಿ ಸಿ. ನಂಜುಂಡಪ್ಪ, ಕೆ. ಸುಕುಮಾರ್, ಕುದುರೆಮುಖದ ಎಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಷನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯ ನರಸಿಂಹಯ್ಯ ಭಾಷಣ ಮಾಡಿ ಹೋರಾಟಕ್ಕೆ ಬೆಂಬಲ ಕೊಟ್ಟರು.

24ರಂದು ಸಂಸೆಯ ಕಾರ್ಮಿಕರು (ಮಹಿಳೆಯರೂ ಸೇರಿ) ಗುಮ್ಮನ ಕಾನಿಗೆ ಮೆರವಣಿಗೆ ಬಂದರು. ಅಂದು ಮತ್ತು 25 ರಂದು ಗುಮ್ಮನಕಾನು ಎಸ್ಟೇಟ್ ಮತ್ತು ಫ್ಯಾಕ್ಟರಿ ಬಂದ್ ಆಯಿತು. 25ರಂದು ಅಸಿಸ್ಟೆಂಟ್ ಲೇಬರ್ ಕಮಿಷನರ್ ಮತ್ತೆ ಸಂಧಾನ ಪ್ರಾರಂಭಿಸಿದರು. ಬೆಳಿಗ್ಗೆ ಗುಮ್ಮನ ಕಾನಿನಲ್ಲಿ ಪ್ರಾರಂಭವಾದ ಮಾತುಕತೆ ಸಂಜೆ ಚಿಕ್ಕಮಗಳೂರಿನಲ್ಲಿ ಮುಂದುವರೆಯಿತು.

22, 23 ಮತ್ತು 25ರಂದು ನಡೆದ ಮಾತುಕತೆಯಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, 5 ಸಬ್‌ಇನ್ಸ್‌ಪೆಕ್ಟರುಗಳು ಮತ್ತು ಎ. ಎಸ್. ಐ.ಗಳು ಹಾಜರಿದ್ದರು ದೊಡ್ಡ ಪೋಲೀಸ್ ಪಡೆಯೇ ಅಲ್ಲಿದ್ದಿತು. ●

ಎಲ್ಲರಿಗೂ ಕೆಲಸ ನನ್ನ ನಿಲುವು :

ಇ. ಎಂ. ಎಸ್.

ಭಾರತದಲ್ಲಿನ ಎಲ್ಲ ಪ್ರಜೆಗಳಿಗೂ ಪೂರ್ಣ ಉದ್ಯೋಗ ಸಿಕ್ಕಬೇಕು ಎಂಬುದೇ ತಮ್ಮ ನಿಲುವಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ. ಎಸ್. ನಂಬೂದಿರಿಪಾದ್ ಹೇಳಿದರು.

'ಮಣ್ಣಿನ ಮಕ್ಕಳಿಗೆ ಮಾತ್ರ ಉದ್ಯೋಗ' ಎಂಬ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರ ಇತ್ತೀಚಿನ ಪ್ರಲಾಪದ ಬಗ್ಗೆ ಇ. ಎಂ. ಎಸ್. ಸಾರ್ವಜನಿಕ ಸಭೆಯೊಂದರಲ್ಲಿ ವಿವರಿಸುತ್ತಿದ್ದರು. ಇದೇ ನೀತಿಯನ್ನು ಕೈಗೆತ್ತಿಕೊಂಡ ಮಹಾರಾಷ್ಟ್ರದ ಶಿವಸೇನೆಯವರು ಬೊಂಬಾಯಿಯಲ್ಲಿ ಕನ್ನಡಿಗರ ವಿರುದ್ಧ ತಿರುಗಿ ಬೀಳಲಿಲ್ಲವೆ ಎಂದು ಪ್ರಶ್ನಿಸಿದ ಇ.ಎಂ.ಎಸ್. ಎಲ್ಲ ರಾಜ್ಯಗಳಲ್ಲೂ 'ಮಣ್ಣಿನ ಮಕ್ಕಳ' ನೀತಿಯೇ ಜಾರಿಯಾಗುವುದಕ್ಕೆ ಹೊರಟರೆ ರಾಷ್ಟ್ರದ ಭಾವೈಕ್ಯತೆ ಸಾಧ್ಯವೆ ಎಂದರು. ಗುಂಡೂರಾಯರು ಕೇವಲ ಕರ್ನಾಟಕದ ಮುಖ್ಯಮಂತ್ರಿಯಲ್ಲ, ಕೇಂದ್ರದಲ್ಲಿ ಅಧಿಕಾರ ಮಾಡುತ್ತಿರುವ ಪಕ್ಷದ ನಾಯಕರೂ ಹೌದು. ರಾಷ್ಟ್ರಾದ್ಯಂತ ಇರುವ ನಿರುದ್ಯೋಗಿಗಳಿಗೆ ಕಾಂಗ್ರೆಸ್ ಸರ್ಕಾರ ಏಕೆ ಉದ್ಯೋಗ ಕೊಡುತ್ತಿಲ್ಲ ಎಂದು ಕೆರಳಿ ಕೇಳಿದ ಇ. ಎಂ. ಎಸ್; ನಿರುದ್ಯೋಗ ಸಮಸ್ಯೆ ಇಷ್ಟೊಂದು ಬೃಹದಾಕಾರವಾಗಿ ಬೆಳೆಯಲು ಕಳೆದ 32 ವರ್ಷಗಳ ಕಾಲ ಆಳಿದ ಕಾಂಗ್ರೆಸ್ ಸರ್ಕಾರವಲ್ಲದೆ ಮತ್ತಾರು ಹೊಣೆಯಲ್ಲ ಎಂದು ಸಾರಿದರು.

'ನಿಮ್ಮ ಪಾರ್ಟಿ ಸರ್ಕಾರ ನಡೆಸ್ತಾ ಇರೊ ಕೇರಳದಲ್ಲಿ ಒಬ್ಬ ಕನ್ನಡಿಗನಿಗೆ ಕೆಲ್ಸ ಕೊಡ್ತಿರಾ ಸ್ವಾಮಿ'-ಕನ್ನಡಾಭಿಮಾನಿ ಸಭಿಕರೊಬ್ಬರಿಂದ ಸಾರ್ವಜನಿಕ ಸಭೆಯಲ್ಲಿ ಇ. ಎಂ. ಎಸ್. ಗೆ ನೇರ ಪ್ರಶ್ನೆ ಬಂತು.

'ಕೇರಳದಲ್ಲಿ ಕೆಲಸ ಮಾತ್ರವಲ್ಲ, ಕೇರಳದ ಮಂತ್ರಿಮಂಡಲದಲ್ಲಿ ಕನ್ನಡಿಗರೊಬ್ಬರು (ಸುಬ್ಬರಾವ್) ಮಂತ್ರಿಯೇ ಆಗಿದ್ದಾರೆ. ನಮ್ಮ ಪಕ್ಷದಿಂದ ಆಯ್ಕೆಯಾದ ಸಂಸತ್ ಸದಸ್ಯರೊಬ್ಬರು (ರಾಮಣ್ಣರೈ) ಅಚ್ಚ ಕನ್ನಡಿಗರೇ ಆಗಿದ್ದಾರೆ'.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಕೊಟ್ಟ ಉತ್ತರಕ್ಕೆ ಸಭಿಕರಿಂದ ದೀರ್ಘ ಚಪ್ಪಾಳೆ. ●

ಬೀಡಿ ಕೆಲಸಗಾರನ ಕುಟುಂಬಕ್ಕೆ ಗ್ರಾಚುಯಿಟಿ ನೀಡಿಕೆ

ಕೋಲಾರದ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಆಡಳಿತದಲ್ಲಿರುವ ಬೀಡಿ ಉದ್ಯಮದಲ್ಲಿ ಕೆಲಸಗಾರರಾಗಿದ್ದ ದಿವಂಗತ ಶೇಕ್ ಅಮೀರ್ ಅವರ ಪತ್ನಿಯಾದ ಮೈಮುನ್ನೀಸ ಅವರಿಗೆ 1972ರ ಗ್ರಾಚುಯಿಟಿ ಕಾಯಿದೆಯ ಪ್ರಕಾರ ರೂ. 1736-28ಗಳಷ್ಟು ಗ್ರಾಚುಯಿಟಿಯನ್ನು 30 ದಿನಗಳೊಳಗೆ ಕೊಡಬೇಕೆಂದು ಡೆಪ್ಯುಟಿ ಲೇಬರ್ ಕಮೀಷನರ ನ್ಯಾಯಾಲಯವು ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಆಡಳಿತಕ್ಕೆ ಆದೇಶ ನೀಡಿದೆ. ಇದನ್ನು ಜಾರಿಗೊಳಿಸಲು ಹೋರಾಡಿದವರು ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಕೋಲಾರದ ಜನರಲ್ ವರ್ಕರ್ಸ್ ಯೂನಿಯನ್ ಅವರು. ○

ಕೋಲಾರದಲ್ಲಿ ಧರಣಿ ಸತ್ಯಾಗ್ರಹ

ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಕೋಲಾರದ ಲೇಬರ್ ಆಫೀಸಿನ ಮುಂದೆ ಕಾರ್ಮಿಕರು 28-3-80ರಿಂದ ಧರಣಿ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. ಬೀಡಿ ಮತ್ತು ಸಿಗಾರ್ ಕೆಲಸಗಾರರಿಗೆ ಕನಿಷ್ಠ ವೇತನ ಕಾಯಿದೆಯನ್ನು ಅನ್ವಯಿಸುವುದು, ರಾಷ್ಟ್ರೀಯ ರಜಾದಿನ, ಬೋನಸ್, ಹೆರಿಗೆ ರಜೆಗಳ ಅನ್ವಯಿಕೆಗೆ ಒತ್ತಾಯ, ಕೂಲಿಯಲ್ಲಿ ಅನ್ಯಾಯವಾಗಿ ಕಡಿತ ಮಾಡಿಕೊಳ್ಳುವುದನ್ನು ನಿಲ್ಲಿಸುವುದು, ವೇಜ್‌ಸ್ಲಿಪ್‌ಗಳ ಹಂಚಿಕೆ, ಆಡಳಿತದ ಮೊಹರು ಮತ್ತು ವಿಳಾಸವಿರುವ ಲಾಗ್‌ಬುಕ್ ಹಂಚಿಕೆ, ಮುಂತಾದ ಬೇಡಿಕೆಗಳಿಗಾಗಿ ಬೀಡಿ ಕಾರ್ಮಿಕರು ಸತ್ಯಾಗ್ರಹ ಹೂಡಿದ್ದಾರೆ. ○

ಕುಂದಾಪುರ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ತಾರೀಕು 24-3-1980 ರಂದು ದ.ಕ. ಜಿಲ್ಲಾ ಕುಂದಾಪುರ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಕಾಂ. ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕಾಂ. ಸಿ. ನಾರಾಯಣರವರು ಹಿಂದಿನ ವರ್ಷದ ಸಂಘದ ಚಟುವಟಿಕೆಯ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಕಾಂ. ಕೆ. ಶಂಕರ್‌ರವರು ಸಂಘದ ಲೆಕ್ಕಪತ್ರದ ವರದಿಯನ್ನು ಓದಿ ಹೇಳಿ, ಬಳಿಕ, ಕೆಲವು ಮುಖ್ಯ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಮಂಗಳೂರಿನಲ್ಲಿ ನಡೆಯುವ ಜಿಲ್ಲಾ ಸಿ.ಐ.ಟಿ.ಯು.ವಿನ ಸಮ್ಮೇಳನವನ್ನು ಯಶಸ್ವಿಗೊಳಿಸಲು ಎಲ್ಲಾ ರೀತಿಯಲ್ಲಿ ಶ್ರಮಿಸಬೇಕೆಂದು ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ ಕಾಂ. ಅಬ್ರಹಾಂ ಕರ್ಕಡರವರು ಮಾತನಾಡುತ್ತಾ, ಗ್ರಾಮಾಂತರ ಪ್ರದೇಶದಲ್ಲಿ ಬೀಡಿ ಕಾರ್ಮಿಕರು ಬೀಡಿ ಕಂಟ್ರಾಕ್ಟುದಾರರ ಸುಲಿಗೆಗೆ ಒಳಗಾಗಿದ್ದು ತೀರಾ ಶೋಷಣೆಗೆ ಒಳಗಾಗಿರುತ್ತಾರೆ ಅಂತ ತಿಳಿಸಿದರು.

ಮುಂದಿನ ವರ್ಷಕ್ಕೆ ಸಂಘದ ಪದಾಧಿಕಾರಿಗಳನ್ನು ಹಾಗೂ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಕಾಂ. ಅಬ್ರಹಾಂ ಕರ್ಕಡರವರನ್ನು ಅಧ್ಯಕ್ಷರನ್ನಾಗಿಯೂ, ವಿ. ನಾಗಪ್ಪ ಮತ್ತು ಗುಲಾಬಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಕಾಂ ಕೆ. ಶಂಕರ್‌ರವರನ್ನು ಕಾರ್ಯದರ್ಶಿಯಾಗಿಯೂ. ರಾಜೀವ ಭಂಡಾರಿ ಮತ್ತು ಕೆ. ಎಸ್. ಗುಲಾಬಿಯವರನ್ನು ಜತೆಕಾರ್ಯದರ್ಶಿಯಾಗಿಯೂ ಹಾಗೂ ವಿ ಮಹಾಬಲನವರನ್ನು ಕೋಶಾಧಿಕಾರಿಯಾಗಿಯೂ ಆಯ್ಕೆ ಮಾಡಲಾಯಿತು. ○

ಶಿರಸಿಯಲ್ಲಿ ಸಾರ್ವಜನಿಕ ಸಭೆ

ಬೆಲೆ ಏರಿಕೆ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಲು ಮಾರ್ಚಿ 3ರಂದು ಶಿರಸಿಯಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಜನತಾ ಪಕ್ಷದ ರಮೇಶ ಚೌಧುರಿ ಮುಂತಾದವರು ಸಭೆಯಲ್ಲಿ ಮಾತನಾಡಿ, ಇಂದಿರಾ ಸರ್ಕಾರ ಸರ್ವಾಧಿಕಾರವನ್ನು ತರುತ್ತಿದೆ ಎಂದು ಎಚ್ಚರಿಸಿದರು. ಸಭೆಗೆ ಎಂ. ಎಸ್. ಧಾರೇಶ್ವರ ಅಧ್ಯಕ್ಷತೆ ವಹಿಸಿದ್ದರು. ಅಗತ್ಯವಸ್ತುಗಳ ಅಭಾವ ಮುಂತಾದುವನ್ನು ಪ್ರತಿಭಟಿಸಲು ಜನತೆ ಒಂದಾಗಬೇಕೆಂದು ಸಭೆಯಲ್ಲಿ ಕರೆಕೊಡಲಾಯಿತು. ○

ಬಂಟ್ವಾಳದಲ್ಲಿ ಘೆರಾವೊ

ದ.ಕ ಜಿಲ್ಲೆ ಬಂಟ್ವಾಳ ಪುರಸಭೆಗೆ ಒಳಪಟ್ಟ ಅರ್ಬಿಗುಡ್ಡೆ, ಮಂಡಾಡಿ, ಮಂಡಾಡಿ ನೆರೆ ಸಂತ್ರಸ್ತರ ಕೊಲನಿ, ಕುದನೆಗುಡ್ಡೆ ಮೊದಲಾದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹಲವು ಬಾರಿ ತಮ್ಮ ಸಂಕಷ್ಟ ಬಗ್ಗೆ ಅರ್ಜಿ ಮನವಿಗಳನ್ನು ಪುರಸಭೆಗೆ ಸಲ್ಲಿಸಿದರೂ. ಈ ಡಿವಿಜನ್ನಿನ ಜನತೆಯಿಂದ ಆಯ್ಕೆಯಾಗಿದ್ದ ಕೌನ್ಸಿಲರಾಗಲಿ, ಪುರಸಭೆಯಾಗಲಿ, ಜನತೆಯ ಬವಣೆಯ ಕಡೆಗೆ ಗಮನ ಹರಿಸದನ್ನು ಪ್ರತಿಭಟಿಸಿ, ಭಾರತ ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸ್‌ವಾದಿ) ಬಂಟ್ವಾಳ ತಾಲ್ಲೂಕು ಸಮಿತಿ ಕೊಟ್ಟ ಕರೆಯಂತೆ ತಾ॥ 27-3-80 ರಂದು ಈ ಪ್ರದೇಶದ ಜನತೆಯಿಂದ ಪುರಸಭೆಗೆ ಘೆರಾವೊ ನಡೆಯಿತು. ಸ್ತ್ರೀ ಪುರುಷರು ಸೇರಿ ಇನ್ನೂರಕ್ಕೂ ಮಿಕ್ಕಿ ಜನರು ಬಂಟ್ವಾಳ ಪೇಟೆಯಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ಬೆಳಿಗ್ಗೆ 11 ಗಂಟೆಗೆ ಆರಂಭಿಸಿದ ಘೆರಾವೊ ಸುಮಾರು ಮಧ್ಯಾಹ್ನ 2 ಗಂಟೆವರೆಗೆ ನಡೆದು ಕೊನೆಗೆ ಪುರಸಭೆಯ ಅಧ್ಯಕ್ಷರು ಮತ್ತು ಚೀಫ್ ಆಫೀಸರು ಈ ಮೂರು ಪ್ರದೇಶಗಳಿಗೂ ಮೂರು ಬಾವಿಗಳನ್ನು ಪುರಸಭೆಯ ನಿಧಿಯಿಂದ ಖರ್ಚು ಮಾಡಿ ತೋಡಿಸುವುದಾಗಿ ಭರವಸೆ ನೀಡಿದ ಬಳಿಕ ಘೆರಾವೊ ಕಾರ್ಯಕ್ರಮವನ್ನು ಹಿಂತೆಗೆಯಲಾಯಿತು.

ಆ ನಂತರ ಪುರಸಭೆಯ ಆವರಣದಲ್ಲಿ ಸೇರಿದ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾದ ಕಾಂ. ಬಿ ಎಚ್. ಬಂಗೇರ ಮತ್ತು ಕಾಂ. ಬಿ. ವಾಸುಗಟ್ಟಿಯವರು ಮಾತನಾಡಿ ಆಡಳಿತದಲ್ಲಿರುವ ಕಾಂಗ್ರೆಸ್ (ಐ) ಪಕ್ಷ ಚುನಾವಣೆಯಲ್ಲಿ ನೀಡಿದ ಆಶ್ವಾಸನೆ, ಭರವಸೆಗಳನ್ನು ಜಾರಿಗೊಳಿಸಲು ಜನ ಸಂಘಟಿತ ಹೋರಾಟ ನಡೆಸಬೇಕೆಂದು ತಿಳಿದರು. ಏಪ್ರಿಲ್ ತಿಂಗಳ 7,8,9ರಂದು ಮಂಗಳೂರಲ್ಲಿ ಜರಗುವ ಜಿಲ್ಲೆಯ ಸಿ. ಐ. ಟಿ ಯು. ಸಮ್ಮೇಳನವನ್ನು ಯಶಸ್ವಿಗೊಳಿಸಲು ಕರೆನೀಡಿದ ಅವರು ಈ ಚಳುವಳಿಯನ್ನು ಬಹಳ ಶಾಂತರೀತಿಯಲ್ಲಿ ಯಶಸ್ವಿಯಾಗಿ ನಡೆಸಿಕೊಟ್ಟ ಎಲ್ಲಾ ಜನತೆಯನ್ನು ಸಿ.ಪಿ.ಐ.(ಎಂ)ನ ಪರವಾಗಿ ಅಭಿನಂದಿಸಿದರು. ●

ತ್ರಿಪುರಾ ಬಗ್ಗೆ ವಿಶೇಷ ಲೇಖನ

ಪುಟ್ಟ ರಾಜ್ಯದಲ್ಲೊಂದು ದೊಡ್ಡ ಪಾರ್ಟಿ

(ಹಿಂದಿನ ಸಂಚಿಕೆಯಿಂದ)

ನಾಲೆಯ ಆಚೆ ಬದಿಗೆ ಮತ್ತೊಂದು ಬೀದಿ. ಈ ಬೀದಿಯಲ್ಲಿಯೇ ಮಂತ್ರಿಗಳ ಮನೆ, ಎಂ. ಎಲ್. ಎ. ಹಾಸ್ಟೆಲ್, ಎಲ್ಲ ಇರುವುದು. ಆ ಸಣ್ಣ ಸರಳ ಊರಿನಲ್ಲಿ ಆಟೋರಿಕ್ಷಾಗಳ ಹಾವಳಿ ಇಲ್ಲ. ಸೈಕಲ್ ರಿಕ್ಷಾಗಳು ಹೇರಳವಾಗಿವೆ. ಬೆಳಗಿನ ಜಾವವಾದ್ದರಿಂದ ಅಲ್ಲೊಂದು ಇಲ್ಲೊಂದು ಸೈಕಲ್ ರಿಕ್ಷಾಗಳನ್ನ ಬಿಟ್ಟರೆ ಮಿಕ್ಕಂತೆ ಊರು ನಿಶ್ಶಬ್ದವಾಗಿತ್ತು ಎಂದೇ ಹೇಳಬೇಕು.

ಎಲ್ಲ ಬೋರ್ಡ್‌ಗಳೂ ಬಂಗಾಲಿಯಲ್ಲಿದ್ದುದರಿಂದ ಮುಖ್ಯಮಂತ್ರಿಗಳ ಮನೆ ಹುಡುಕುತ್ತಾ ಹೋಟಿದ್ದ ನನಗೆ ತಲೆ ಬುಡ ಗೊತ್ತಾಗುತ್ತಿರಲಿಲ್ಲ. ಹಾಗೇ ನಡೆದಿದ್ದ ನನಗೆ ಒಂದು ಮನೆಯ ಮುಂದೆ ದೊಡ್ಡ ಜನಸಂದಣಿ ಕಾಣಿಸಿತು. ಹಳ್ಳಿಗರಂತೆ ಕಾಣುತ್ತಿದ್ದ ಜನಗಳು, ಮುದುಕರು, ಹುಡುಗರು, ಅಲ್ಲಿ ಗುಂಪಾಗಿ ನಿಂತು ಯಾರ ಹತ್ತಿರವೋ ಮಾತನಾಡುತ್ತಿದ್ದರು. ಅಷ್ಟೊಂದು ಜನ ನೆರೆದಿದ್ದರಿಂದ ಅದೇ ಮುಖ್ಯಮಂತ್ರಿಯವರ ಮನೆಯಿರಬಹುದು ಅನ್ನಿಸಿತು. ಬಗೆ ಬಗೆಯ ಹೂವಿನ ಗಿಡಗಳಿದ್ದ ಪುಟ್ಟ ಬಂಗಲೆ ಅದು. ಬಾಗಿಲಲ್ಲಿ ನಿಂತಿದ್ದ ಸೆಂಟ್ರಿಯನ್ನ ಕೇಳಿ ಅದು ಮುಖ್ಯಮಂತ್ರಿಯದೇ ಮನೆ ಎಂದು ಖಾತ್ರಿ ಮಾಡಿಕೊಂಡು ಒಳಹೊಕ್ಕೆ.

ಗುಂಪಿನ ನಡುವೆ ನಿಂತಿದ್ದ, ಬಿಳಿಯ ಶರಟು, ಪಂಚೆ ಉಟ್ಟಿದ್ದ ವ್ಯಕ್ತಿಯೊಬ್ಬರನ್ನ ಬಂದಿದ್ದ ಎಲ್ಲರೂ ಮುಗಿಬಿದ್ದು ಮಾತನಾಡಿಸುತ್ತಿದ್ದರು. ಆತ ಪೂರ್ಣ ಆಸಕ್ತಿಯಿಂದ ಅವರೆಲ್ಲರ ಅಹವಾಲುಗಳನ್ನ ಕೇಳುತ್ತಿದ್ದರು. ಚಿಕ್ಕಮಗಳೂರಿಗೆ ಇಂದಿರಾಗಾಂಧಿಯ ವಿರುದ್ಧ ಚುನಾವಣಾ ಪ್ರಚಾರಮಾಡಲು ಬಂದಿದ್ದ ಕಾಂ. ನೃಪೆನ್ ಚಕ್ರವರ್ತಿಯವರನ್ನ ಕಂಡಿದ್ದ ನನಗೆ ಆ ವ್ಯಕ್ತಿಯ ಗುರುತು ಸಿಕ್ಕಿತು. ನೂರು ಜನ ಹಳ್ಳಿಗರ ನಡುವೆ ನಿಂತು ಅವರನ್ನು ಅರ್ಥ ಮಾಡಿಕೊಳ್ಳುವ ಪ್ರಯಾಸದಲ್ಲಿದ್ದ ಆತನಲ್ಲಿ ಮುಖ್ಯಮಂತ್ರಿಗೆ ನಾವು ಆರೋಪಿಸುವ ಯಾವ ಬಾಹ್ಯಾಡಂಬರವೂ ಇರಲಿಲ್ಲ. ರಸ್ತೆಯ ಮೇಲೆ ಕಾರುಗಳಾಗಲೀ, ಬೊಜ್ಜು ಹೊಟ್ಟೆಯ ಜನಗಳಾಗಲೀ, ಹಾರ ತುರಾಯಿಗಳಾಗಲೀ ಕಣ್ಣಿಗೆ ಬೀಳಲಿಲ್ಲ. ಅಲ್ಲಿ ನೆರೆದಿದ್ದ ನೂರಾರು ಹಳ್ಳಿಗರು ಆತನಲ್ಲಿ, ತಮ್ಮ ಕೆಲಸದ ಬಗ್ಗೆ, ಜಮೀನಿನ ವ್ಯಾಜ್ಯದ ಬಗ್ಗೆ, ತೀರಿಸಲಾಗದ ಸಾಲದ ಬಗ್ಗೆ, ಬಿದ್ದು ಹೋಗಿರುವ ತಮ್ಮ ಜೋಪಡಿಯ ಬಗ್ಗೆ ಹೇಳಿಕೊಳ್ಳುತ್ತಿದ್ದರು.

ಅವರು ಹೇಳಿದ್ದನ್ನ ಏಕಾಗ್ರತೆಯಿಂದ ಕೇಳಿ, ಅವರೊಂದಿಗೆ ಚರ್ಚೆ ಮಾಡಿ, ಪಕ್ಕದಲ್ಲಿ ನೋಟ್‌ಬುಕ್ ಹಿಡಿದು ನಿಂತಿದ್ದ ಅವರ ಪ್ರೈವೇಟ್ ಸೆಕ್ರಟರಿಗೆ (ಆತನೂ ಪಾರ್ಟಿಯ ಒಬ್ಬ ಕಾಮ್ರೇಡ್) ಸಂಬಂಧಪಟ್ಟ ವಿಷಯಗಳನ್ನ ತಿಳಿಸುತ್ತಿದ್ದರು. ಪ್ರತೀ ದಿನ ಬೆಳಗ್ಗೆ ಆರು ಗಂಟೆಗೆಲ್ಲಾ ಪ್ರಾರಂಭವಾಗುವ ಈ ಕಾರ್ಯ ಒಂಬತ್ತು ಗಂಟೆಯವರೆಗೂ ನಡೆಯುತ್ತದೆ.

ಕಾಂ. ನೃಪೆನ್ ಚಕ್ರವರ್ತಿಯವರಿಗೆ ಈಗ ಎಪ್ಪತ್ತನಾಲ್ಕು ವರ್ಷ. ನೋಡಲಿಕ್ಕೆ ಆತ ಐವತ್ತರ ಗಡಿ ದಾಟಿದ್ದಾರೆ ಎಂದು ನಂಬುವುದು ಕಷ್ಟ. ನೃಪೆನ್ ಚಕ್ರವರ್ತಿ ಅವಿವಾಹಿತರು. ಮುಖ್ಯಮಂತ್ರಿ ನಿವಾಸದ ಒಂದು ಭಾಗದಲ್ಲಿ ಆಫೀಸ್ ಹಾಗೂ ಬಂದವರನ್ನು ಬೆಟ್ಟಿ ಮಾಡಲಿಕ್ಕೆ ಒಂದು ಹಾಲ್ ಇದೆ. ಮತ್ತೊಂದು ಬದಿಯಲ್ಲಿ ಪಾರ್ಟಿಯ ಒಂದಿಬ್ಬರು ಕಾಮ್ರೇಡ್‌ಗಳು (ಅವರಲ್ಲಿ ಒಬ್ಬ ನೃಪೆನ್ ಅವರ ಪಿ.ಎ.) ವಾಸಿಸುತ್ತಾರೆ. ಹಿಂಬದಿಯ ಒಂದು ರೂಮಿನಲ್ಲಿ ನೃಪೆನ್ ಚಕ್ರವರ್ತಿಯವರ ವಾಸ. ಆ ಇಡೀ ಮನೆಯಲ್ಲಿ, ಭಾರೀ ಪರದೆಗಳು, ನೆಲಕ್ಕೆ ಮೆತ್ತೆ, ಕೂಡಲಿಕ್ಕೆ ಸಿಂಹಾಸನದ ಮಾದರಿಯ ಸೋಫಾಗಳು, ಏರ್ ಕಂಡೀಷನರ್ ಇವಾವುದೂ ಅಲ್ಲಿ ಇಲ್ಲ. ಅಲ್ಲಿ ಕಾಣುವ ಪೀಠೋಪಕರಣಗಳೆಂದರೆ ಕೆಲಸ ಮಾಡಲಿಕ್ಕೆ ಬೇಕಾಗುವ ಟೇಬಲ್, ಕುರ್ಚಿ, ಮಲಗಲಿಕ್ಕೆ ಮಂಚ. ಎಲ್ಲ ಕಡೆಯೂ, ಪುಸ್ತಕಗಳಿಂದ ತುಂಬಿದ ಬೀರುಗಳು ಎದ್ದು ಕಾಣುತ್ತವೆ. ಮಂತ್ರಿಮನೆಗಳ ಆಡಂಬರ ಅಟ್ಟಹಾಸಗಳನ್ನ ಕಂಡವರಿಗೆ ಸಿಚ್ಚೆನ್ನಿಸುವ ಜಾಗ ಅದು.

ಒಂದು ರೀತಿಯಲ್ಲಿ ಅಗರ್ತಲಾ ಜಾಸ್ತಿ ಬೆಳೆದುಬಿಟ್ಟಿರುವ ಒಂದು ಹಳ್ಳಿ ಎಂದೇ ಹೇಳಬೇಕು. ಅಗರ್ತಲಾಕ್ಕೆ ಊರಿನ ರೂಪ ಕೊಡಲು ಹೆಣಗಿದಾತ ತ್ರಿಪುರಾದ ಮಹರಾಜ ವೀರ ವಿಕ್ರಮ ದೇವ. ಅಗರ್ತಲಾದ ಗಾತ್ರಕ್ಕೆ ಹಾಗೂ ತ್ರಿಪುರಾದ ಗಾತ್ರಕ್ಕೆ ಹಾಸ್ಯಾಸ್ಪದವೆನಿಸುವಷ್ಟು ದೊಡ್ಡದಾದ ಆತನ ಅರಮನೆ ಊರಮಧ್ಯೆ ನಿಂತಿದೆ. ಅರಮನೆಯ ಸುತ್ತ ಇರುವ ಕೋಟೆ ಮಹಾದ್ವಾರಗಳನ್ನ ದಾಟಿ ನಡೆದರೆ ಅಚ್ಚ ಬಿಳಿಯ ಅರಮನೆ ಕಣ್ಣೆದುರು ನಿಲ್ಲುತ್ತದೆ. ವಿಧಾನಸೌಧದ ಮಾದರಿಯಲ್ಲಿ ತುಂಬ ಅಗಲವಾದ ಅನೇಕ ಮೆಟ್ಟಲುಗಳನ್ನ ಹತ್ತಿ ಅರಮನೆಯ ಮಹಾದ್ವಾರಕ್ಕೆ ಬಂದರೆ ಅಲ್ಲಿ ಕಂಚಿನ ಎರಡು ಸುಂದರಿಯರು ದೀಪ ಹಿಡಿದು ಸ್ವಾಗತಿಸುತ್ತಾ ನಿಂತಿರುತ್ತಾರೆ. ಥೇಟ್ ರೋಮನ್ ಶಿಲ್ಪದ ಮಾದರಿಯಲ್ಲಿರುವ ಅವುಗಳನ್ನು ಮಹಾರಾಜ ಇಂಗ್ಲೆಂಡಿನಲ್ಲಿ ಎರಕ ಹೊಯ್ಸಿ ತರಿಸಿದನಂತೆ. ಹಾಗೇ ಒಳಗೆ ನಡೆದರೆ ಥೇಟ್ ಇಂಗ್ಲೆಂಡ್ ಮಾದರಿಯ ನೃತ್ಯ ಶಾಲೆಗಳು (ಸ್ಪ್ರಿಂಗಿನ ಮೇಲೆ ಮರದ ಹಲಗೆಗಳನ್ನ ಜೋಡಿಸಿ ತಯಾರಿಸಿದ ನೃತ್ಯ ಶಾಲೆಯ ನೆಲ, ಬಾಲ್‌ರೂಮ್ ಡಾನ್ಸ್‌ಗಳಿಗೆಂದೇ ವಿಶೇಷವಾಗಿ ತಯಾರಾದದ್ದು) ಭಾರಿಭಾರಿ ಗಾಜಿನ ಷಾಂಡಲಿಯರ್‌ಗಳು, ಕಲಾಕೃತಿಗಳು ಕಣ್ಣಿಗೆ ಬೀಳುತ್ತದೆ. ಜನರ ದುಡ್ಡಿನಲ್ಲಿ ವಿಲಾಸ ನಡೆಸಿ ದುಂದು ಮಾಡಿದ ಮಹಾರಾಜರುಗಳ ಅರಮನೆಗಳನ್ನ ನೋಡಿದಾಗ, ಅವರು ತ್ರಿಪುರಾದಲ್ಲಿರಲಿ, ಮೈಸೂರಿನಲ್ಲಿರಲಿ ಅವರೆಲ್ಲಾ ಒಂದೇ ಎನ್ನಿಸದೆ ಇರದು.

ಈಗ ಈ ಅರಮನೆಯನ್ನ ಸರಕಾರ ವಹಿಸಿಕೊಂಡು, ಅದನ್ನೇ ಅಸೆಂಬ್ಲಿ ಭವನವನ್ನಾಗಿ ಮಾಡಿದೆ. ತ್ರಿಪುರಾ ತೀರ ಹಿಂದುಳಿದಿದ್ದರೆ ಅದಕ್ಕೆ ಕಾರಣ ಕೂಡಾ ಈ ಮಹಾರಾಜನೇ. ಮೊದಲಿನಿಂದಲೂ ಮೇಲ್ವರ್ಗದ ಬಂಗಾಲಿ ಸಂಸ್ಕೃತಿಯ ಬಗ್ಗೆ ಒಲವಿದ್ದ ಮಹಾರಾಜನಿಗೆ ತ್ರಿಪುರಾದ ಆದಿವಾಸಿಗಳು ಕಾಲ ಕಸ. ಕಲ್ಕತ್ತೆಯಿಂದ ರವೀಂದ್ರನಾಥ ಟಾಗೂರರನ್ನ, ಜಗದೀಶ್ ಚಂದ್ರ ಬೋಸರನ್ನ ಕರೆಸಿ ಅವರಿಗೆ ಸನ್ಮಾನ ಮಾಡಿ ಕಳಿಸುತ್ತಿದ್ದ ಮಹಾರಾಜನಿಗೆ ತನ್ನ ಜನರಿಗೆ ವಿದ್ಯಾಭ್ಯಾಸ ಸಿಗಬೇಕು, ಆದಿವಾಸಿಗಳ ಸಂಸ್ಕೃತಿ ಬೆಳೆಯಬೇಕು ಎಂದು ಮಾತ್ರ ಅನ್ನಿಸಿರಲಿಲ್ಲ. ತ್ರಿಪುರಾದ ಆದಿವಾಸಿಗಳ ಭಾಷೆಯಾದ 'ಕಾಕ್‌ಬರೋಕ್' ಅನ್ನು ಸ್ಕೂಲಿನಲ್ಲಿ ಕಲಿಸುವ ಏರ್ಪಾಡು ಮಾಡಿದ್ದು ಎಡಪಂಥೀಯ ಸರಕಾರ. ಮಹಾರಾಜನ ಮಾತೃಭಾಷೆಯೂ ಕೂಡಾ ಕಾಕ್‌ಬರೋಕ್ ಆದರೂ ಆತನಿಗೆ ಆ ಭಾಷೆ ಬರುತ್ತಿರಲಿಲ್ಲವಂತೆ. ಆತನ ಒಡನಾಟ ಬಂಗಾಲಿ ಹಾಗೂ ಇಂಗ್ಲೀಷ್ ಜೊತೆ. ಈ ದೇಶಕ್ಕೆ ಬ್ರಿಟೀಷರಿಂದ ಬಿಡುಗಡೆ ದೊರಕಿದಾಗ ತನ್ನ ಪುಟ್ಟ ರಾಜ್ಯವನ್ನು ಭಾರತದೊಂದಿಗೆ ವಿಲೀನಗೊಳಿಸಲು ಮಹಾರಾಜ ಒಪ್ಪಿದ್ದರಿಂದಾಗಿ ತ್ರಿಪುರಾ ಭಾರತದ ಕೇಂದ್ರ ಶಾಸಿತ ಪ್ರದೇಶವಾಯಿತು. 1971ರಲ್ಲಿ ತ್ರಿಪುರಾಕ್ಕೆ ಪೂರ್ಣ ರಾಜ್ಯದ ಮಾನ್ಯತೆ ಕೊಡಲಾಯಿತು. ಮಿಕ್ಕ ಅನೇಕ ಮಹಾರಾಜರುಗಳಂತೆ ಕಿರೀಟ ವಿಕ್ರಮ ಮಹಾರಾಜ ಕೂಡಾ ಕಾಂಗ್ರೆಸ್ ಸೇರಿದ. ಒಂದೆರಡು ಬಾರಿ ತ್ರಿಪುರಾದಿಂದ ಎಂ.ಪಿ ಯಾಗಿ ಕೂಡಾ ಚುನಾಯಿತನಾಗಿದ್ದ.

ತ್ರಿಪುರಾದ ಸಂಸ್ಕೃತಿಯ ಮೇಲೆ ಬಂಗಾಲಿಗಳ ಪ್ರಭಾವ ತುಂಬ ಬೆಳೆದಿದೆ. ಓದು, ಬರಹ, ಪುಸ್ತಕಗಳು, ಆಚಾರ, ವಿಚಾರ ಎಲ್ಲದರ ಮೇಲೂ ಬಂಗಾಲಿ ಪ್ರಭಾವ ಎದ್ದು ಕಾಣುತ್ತದೆ. ಆದರೆ ತ್ರಿಪುರಾದ ಆದಿವಾಸಿಗಳಿಗೆ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಇದೆ. ತುಂಬ ಸರಳ ಸ್ವಭಾವದ ಈ ಜನ ಅನಕ್ಷರತೆಯಿಂದಾಗಿ ತುಂಬ ಹಿಂದುಳಿದಿದ್ದಾರೆ. ಬಹಳಷ್ಟು ವೇಳೆ ಆದಿವಾಸಿಗಳ ಭೂಮಿಯನ್ನ ಆನಂತರ ಬಂದವರು ಕಬಳಿಸಿ ಆ ಜನ ಭೂಹೀನರಾಗಿದ್ದಾರೆ. ಬೊಂಬಿನಿಂದ ಕರಕುಶಲವಸ್ತು ತಯಾರಿಸುವಲ್ಲಿ, ಬಟ್ಟೆ ನೇಯುವಲ್ಲಿ ಈ ಜನ ತುಂಬ ಕುಶಲರು. ಅವರ ಹಾಡು, ನೃತ್ಯಗಳೂ ಕೂಡಾ ತುಂಬ ಸುಂದರ. ಹಿಂದಿ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ದಿ|| ಸಚಿನ್‌ದೇವ್ ಭರ್ಮನ್ ತ್ರಿಪುರಾದ ಆದಿವಾಸಿ ಜನಾಂಗಕ್ಕೆ ಸೇರಿದವರೆಂದು ಬಹಳ ಜನರಿಗೆ ತಿಳಿದಿರಲಿಕ್ಕಿಲ್ಲ. ತ್ರಿಪುರಾದಲ್ಲಿ ಎಡ ಪಂಥೀಯ ಸರ್ಕಾರ ಬಂದ ಮೇಲೆ ಮೊತ್ತ ಮೊದಲ ಬಾರಿಗೆ ಈ ಅಂಶಗಳತ್ತ ಗಮನ ಹರಿಸಲಾಗಿದೆ. ಅವರ ಭಾಷೆಯಾದ 'ಕಾಕ್‌ಬರೋಕ್' ಅನ್ನ ರಾಜ್ಯಭಾಷೆಯನ್ನಾಗಿ ಸಾರಲಾಗಿದೆ. ಅವರ ಸಂಸ್ಕೃತಿಯನ್ನ ಉಳಿಸಿ ಬೆಳೆಸುವ ಕಾರ್ಯಕ್ರಮ ಪ್ರಾರಂಭವಾಗಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಭೂಮಿ ಕಳೆದುಕೊಂಡಿರುವ ಆದಿವಾಸಿಗಳಿಗೆ ಅವರ ಭೂಮಿಯನ್ನ ಕಾಯಿದೆ ಮೂಲಕ ಹಿಂದೆ ಕೊಡಿಸುವ ಕೆಲಸ ಕೂಡ ನಡೆದಿದೆ. ಇಡೀ ರಾಜ್ಯದಲ್ಲಿ ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳನ್ನ ಗುರ್ತುಮಾಡಿ ಆ ಪ್ರದೇಶಗಳನ್ನ ಟ್ರೈಬಲ್ ಆಟಾನಮಸ್ ಜಿಲ್ಲೆಗಳಾಗಿ ಸಾರಲಾಗಿದೆ. ಇಂತಹ ಟ್ರೈಬಲ್ ಆಟಾನಮಸ್ ಜಿಲ್ಲೆಗಳಿಗೆ ಚುನಾವಣೆಗಳನ್ನ ನಡೆಸಿ ಆ ಪ್ರದೇಶದ ಬೆಳವಣಿಗೆಯ ಕೆಲವು ಕಾರ್ಯಕ್ರಮವನ್ನ ಚುನಾಯಿತ ಆದಿವಾಸಿ ಪ್ರತಿನಿಧಿಗಳಿಗೆ ವಹಿಸಿಕೊಡುವುದು ಇದರ ಉದ್ದೇಶ. ಇಂತಹ ಒಂದು ಕಾರ್ಯಕ್ರಮಕ್ಕೆ ಮೇಲೆ ಮೇಲೆ ಎಲ್ಲ ರಾಜಕೀಯ ಪಕ್ಷಗಳೂ ಬೆಂಬಲ ಸೂಚಿಸಿದ್ದರೂ ಒಳಗಿಂದೊಳಗೇ ಈ ಕೆಲಸವನ್ನ ತಡೆಯುವ ಪ್ರಯತ್ನದಲ್ಲಿ ಈ ಎಲ್ಲ ಪಕ್ಷಗಳೂ ಭಾಗಿಯಾಗಿವೆ. ಬಂಗಾಲಿಗಳ ಜಾತಿವಾದಿ ಸಂಘಟನೆಯಾಗಿ ಹುಟ್ಟಿಕೊಂಡಿರುವ 'ಅಮರ್ ಬಂಗಾಲಿ' ಈ ಪ್ರಗತಿಪರ ಕಾರ್ಯಕ್ರಮವನ್ನ ವಿರೋಧಿಸುತ್ತಿದೆ. ಕಾಂಗ್ರೆ, ಜನತಾ ಮುಂತಾದ ಎಲ್ಲಾ ಬೂರ್ಜ್ವಾ ಪಕ್ಷಗಳೂ ಒಳಗಿಂದೊಳಗೇ ಅಮರ ಬಂಗಾಲಿಗೆ ಕುಮ್ಮಕ್ಕು ಕೊಡುತ್ತಿವೆ.

ನಾನಾಗಲೇ ಹೇಳಿದಂತೆ ತ್ರಿಪುರಾದಲ್ಲಿ ಹೇಳಿಕೊಳ್ಳುವಂತಹ ಕೈಗಾರಿಕೆಗಳ್ಯಾವುದೂ ಇಲ್ಲ. ಹಾಗಾಗಿ ಅಲ್ಲಿ ಸಂಘಟಿಸಬಲ್ಲ ಕಾರ್ಮಿಕರ ಸಂಖ್ಯೆ ಕಡಿಮೆ. ತ್ರಿಪುರಾದಲ್ಲಿ ರೇಲ್ವೆ ಸಾಗಾಣಿಕೆ ಏನೇನೂ ಇಲ್ಲವಾದ್ದರಿಂದ ಅಲ್ಲಿ ಎಲ್ಲ ಸಾಗಾಣಿಕೆಯೂ ರಸ್ತೆಯ ಮೂಲಕವೇ ಆಗಬೇಕು. ಹಾಗಾಗಿ ಅಲ್ಲಿ ಲಾರಿ ಹಾಗೂ ಬಸ್ಸುಗಳ ಡ್ರೈವರ್ ಕ್ಲೀನರ್ ಮುಂತಾದವರ ಸಂಘ ಸಾಕಷ್ಟು ದೊಡ್ಡ ಯೂನಿಯನ್. ನನ್ನನ್ನ ಊರು ತೋರಿಸಲಿಕ್ಕೆಂದು ಕರೆದುಕೊಂಡು ಹೊರಟ ಪಾರ್ಟಿಯ ಕಾಮ್ರೇಡ್ ಅಗರ್ತಲಾದ ಮುಖ್ಯ ಬೀದಿಯಲ್ಲಿ ಹೊರಟಿದ್ದಾಗ ಮಳಿಗೆಯೊಂದರತ್ತ ತೋರಿಸಿ ಅದು ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಯೂನಿಯನ್ ಆಫೀಸ್ ಎಂದರು. ಅದರ ಮೇಲೆ ಕಾವಿಬಣ್ಣದ ಬಟ್ಟೆಯ ಮುಳುಗುವ ಸೂರ್ಯನ ಲಾಂಛನವಿರುವ ಧ್ವಜ ಹಾರುತ್ತಿತ್ತು. ಚಕಿತನಾದ ನಾನು 'ತ್ರಿಪುರಾದಲ್ಲೇ ದೊಡ್ಡ ಯೂನಿಯನ್‌ಗಳಲ್ಲಿ ಒಂದು ಇದು ಎನ್ನುತ್ತೀರಿ ಅದು ಸೀಟು (CITU) ಕೈಯಲ್ಲಿಲ್ಲವೇ?' ಎಂದು ಕೇಳಿದೆ. ಆ ಯೂನಿಯನ್ನಿನ ಬೆಳವಣಿಗೆ ವಿವರಿಸಿದ ಕಾಮ್ರೇಡ್, 'ಅದು ಮೊದಲು ಅಮರ ಬಂಗಾಲಿ, ಕಾಂಗ್ರೆಸ್ ಮುಂತಾದವರ ಕೈಯಲ್ಲಿತ್ತು. ಈಗ ಅದರಲ್ಲಿ ನಮ್ಮ ಕಾಮ್ರೇಡ್‌ಗಳ ಸಂಖ್ಯೆ ಬಹಳ ಇದೆ. ಮನಸ್ಸು ಮಾಡಿದರೆ ಈಗಲೂ ಆ ಯೂನಿಯನ್ CITU ಯೂನಿಯನ್ ಆಗಿ ಮಾಡಬಹುದು. ಆದರೆ ಮತ್ತೊಂದು ಸಣ್ಣ Splinter ಯೂನಿಯನ್ ಹುಟ್ಟುವುದು ನಮಗೆ ಬೇಕಿಲ್ಲ. ಆದ್ದರಿಂದ ನಾವೇ ಆ ಬಗ್ಗೆ ಪ್ರಯತ್ನ ಮಾಡಿಲ್ಲ' ಎಂದರು. ನಾನು ಯೂನಿಯನ್ ಆಫೀಸಿಗೆ ಭೇಟಿ ಕೊಡುವ ಆಸಕ್ತಿ ತೋರಿಸಿದೆ.

ಯೂನಿಯನ್ ಆಫೀಸಿನ ಒಳಹೊಕ್ಕಂತೆ ನನ್ನ ಜೊತೆ ಬಂದಿದ್ದ ಕಾಮ್ರೇಡ್ ಹೇಳಿದ ಮಾತು ಅರ್ಥವಾಯಿತು. ಆ ಪುಟ್ಟ ಮಳಿಗೆಯ ಗೋಡೆಯ ಮೇಲೆ ರಾರಾಜಿಸುತ್ತಿದ್ದ ಫೋಟೋಗಳ ನಡುವೆ ವಿಚಿತ್ರ ರೀತಿಯಲ್ಲಿ ರಾಜಿಯಾಗಿತ್ತು, ಸ್ಟಾಲಿನ್, ಲೆನಿನ್, ಮಾರ್ಕ್ಸ್, ಎಂಗೆಲ್ಸ್, ಮಾವೋ ಅವರ ದೊಡ್ಡ ಫೋಟೋಗಳ ಜೊತೆ, ಟಾಗೋರ್, ಬೋಸ್ ಮುಂತಾದವರ ಚಿತ್ರಗಳೂ ಇದ್ದವು. ಕೆಲವು ಕಾಂಗ್ರೆಸ್ ನಾಯಕರ ಫೋಟೋ ಕೂಡಾ ಇತ್ತು. ಎಲ್ಲೋ ಮೂಲೆಯೊಂದರಲ್ಲಿ ವಿವೇಕಾನಂದರ ಫೋಟೋ ಕೂಡಾ ಇತ್ತು. ಮತ್ತೊಂದು ಮೂಲೆಯಲ್ಲಿ ಗಾಡ್ರೆಜ್ ಬೀರುವಿನ ಮೇಲೆ ಬೆತ್ತದಲ್ಲಿ ಮಾಡಿದ ಮಹಿಷಾಸುರಮರ್ದಿನಿ-ಕಾಳಿಯ ವಿಗ್ರಹವೂ ಇತ್ತು. ಇಡೀ ಯೂನಿಯನ್ ಆಫೀಸಿನ ಗೋಡೆಯ ಒಂದಿಂಚೂ ಬಿಡದ ಹಾಗೆ ಫೋಟೋಗಳಿಂದ ತುಂಬಿ ಹೋಗಿತ್ತು.

ಏಳೆಂಟು ಜನ ರೂಮಿನ ಮಧ್ಯೆ ಇದ್ದ ಟೇಬಲ್ ಸುತ್ತ ಕೂತು ಬೀಡಿ ಸೇದುತ್ತ ಹರಟುತ್ತಿದ್ದರು. ಭಾಷೆಬಾರದ ನಾವು ಪರಸ್ಪರ ಮುಗುಳ್ನಗೆ ಹಾಗೂ ನಮಸ್ಕಾರಗಳ ಮೂಲಕ ಪರಿಚಯ ಮಾಡಿಕೊಂಡೆವು. ಎಲ್ಲ ಊರಿನ ಎಲ್ಲ ಲಾರಿ ಡ್ರೈವರ್‌ಗಳಂತಿದ್ದ ಅವರಲ್ಲಿ ನೋಡಲಿಕ್ಕೆ ಅಂತಹ ವಿಶೇಷವೇನೂ ಕಾಣಲಿಲ್ಲ ದಿನವಿಡೀ

(7ನೇ ಪುಟ ನೋಡಿ)

ಜಿಂಬಾಬ್ವೆ ವಿಜಯದ ವೈಶಿಷ್ಟ್ಯ

ಜಿಂಬಾಬ್ವೆ - ರೊಡೇಸಿಯದಲ್ಲಿ ನೂರು ಸ್ಥಾನಗಳ ಸಂಸತ್ತಿಗೆ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ರಾಬರ್ಟ್ ಮುಗಾಬೆಯವರ ಜಿಂಬಾಬ್ವೆ ಆಫ್ರಿಕನ್ ನ್ಯಾಷನಲ್ ಯೂನಿಯನ್ ಪಡೆದಿರುವ 57 ಸ್ಥಾನಗಳ ಜಯ ಮತ್ತು ಕೋಮೋ ಅವರ ಜಿಂಬಾಬ್ವೆ ಆಫ್ರಿಕನ್ ಪೀಪಲ್ಸ್ ಯೂನಿಯನ್‌ನ 20 ಸ್ಥಾನಗಳ ಗಳಿಕೆ, ಹೀಗೆ ಎಪ್ಪತ್ತೇಳು ಸ್ಥಾನಗಳ ಗೆಲುವನ್ನು ಮೊದಲು ಸದ್ಯದ ಅಂತರ ರಾಷ್ಟ್ರೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವೀಕ್ಷಿಸಬೇಕು.

ಜಗತ್ತಿನಲ್ಲಿ ಈಗ ಮುನ್ನಡೆಯುತ್ತಿರುವುದು ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಶಕ್ತಿಗಳು; ಸಾಮ್ರಾಜ್ಯಶಾಹಿ, ಜನಾಂಗವಾದಗಳು ದುರ್ಬಲವಾಗುತ್ತಾ ಇವೆ. ಆದರೆ ದುರ್ಬಲಗೊಂಡಿರುವ ಸಾಮ್ರಾಜ್ಯಶಾಹಿಯು ತನ್ನನ್ನು ವಿರೋಧಿಸುವ ಶಕ್ತಿಗಳ ಮೇಲೆ ಜಗತ್ತಿನ ಒಂದಲ್ಲ ಒಂದು ಭಾಗದಲ್ಲಿ ಆಕ್ರಮಣ ನಡೆಸುತ್ತಿದೆ ಎಂಬ ಲೆಕ್ಕಾಚಾರವು ಸರಿಯಾದುದೆಂಬುದನ್ನು ಜಿಂಬಾಬ್ವೆ ತೋರಿಸಿಕೊಟ್ಟಿದೆ.

ಅರವತ್ತರ ದಶಕದ ಮಧ್ಯಭಾಗದಲ್ಲಿ ಇಂಡೋನೇಷಿಯದಲ್ಲಿ ಮತ್ತು ಎಪ್ಪತ್ತರ ಆರಂಭದಲ್ಲಿ ಚಿಲಿಯಲ್ಲಿ ಸಾಮ್ರಾಜ್ಯಶಾಹಿಯು ಹೀಗೆ ಪ್ರವೇಶಿಸಿತ್ತು. ತೈಲ ಸಂಪತ್ತಿರುವ ಪಶ್ಚಿಮ ಏಷ್ಯಾ ಮತ್ತು ಗಲ್ಫ್‌ನಲ್ಲಿ ಈಜಿಪ್ಟಿನ ಮೇಲೆ ಕ್ಯಾಂಪ್‌ಡೇವಿಡ್ ಒಪ್ಪಂದವನ್ನು ಹೇರುವುದರ ಮೂಲಕ ಅರಬ್ ಒಗ್ಗಟ್ಟನ್ನು ಒಡೆಯಲು ಸಾಮ್ರಾಜ್ಯಶಾಹಿಗಳಿಗೆ ಸಾಧ್ಯವಾಯಿತು. ಆ ಪ್ರದೇಶದಲ್ಲಿ ಈಗ ಮಿಲಿಟರಿ ನೆಲೆಯನ್ನು ಮಾಡಲು ಅವರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ದಕ್ಷಿಣ ಅಮೆರಿಕಾದಲ್ಲಿ ಉರುಳುತ್ತಿರುವ ಫ್ಯಾಸಿಸ್ಟ್ ಮಿಲಿಟರಿ ಗುಂಪುಗಳನ್ನು ಎತ್ತಿಹಿಡಿಯಲು ಅವರು ಪ್ರಯತ್ನಿಸುತ್ತಿದ್ದಾರೆ.

ಸಾಮ್ರಾಜ್ಯಶಾಹಿಯ ಸೋಲುಗಳು:

ಆದರೆ ಸಾಮ್ರಾಜ್ಯಶಾಹಿಗೆ, ಅದರಲ್ಲೂ ಅಮೆರಿಕದ ಸಾಮ್ರಾಜ್ಯಶಾಹಿಗೆ ಈಗ ಅನೇಕ ಕಡೆಗಳಲ್ಲಿ ವಿರೋಧ ಮತ್ತು ಸೋಲುಗಳು ಕಾಣುತ್ತಿವೆ. ದಕ್ಷಿಣ ಅಮೆರಿಕದ ನಿಕರಾಗುವದಲ್ಲಿ ಅಮೆರಿಕ ಎತ್ತಿನಿಲ್ಲಿಸಿದ ಸೊಮೋಜ ಸರ್ವಾಧಿಕಾರ ಉರುಳಿದೆ. ಎಲ್ ಸಾಲ್ವಡಾರ್‌ನಲ್ಲಿ ಕದನ ನಡೆಯುತ್ತಿದೆ. ಇರಾನಿನಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿಗೆ ಭಾರಿ ಸೋಲುಂಟಾಗಿದೆ. ಅಲ್ಲಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದರೂ ಅರಬ್ ಐಕ್ಯತೆ ಮುಂದುವರೆಯುತ್ತಿದೆ. ಆಫ್‌ಘಾನಿಸ್ತಾನದ ಜನತಾ ಪ್ರಜಾಪ್ರಭುತ್ವವಾದಿ ಗಣರಾಜ್ಯದಲ್ಲಿ ಸೋವಿಯತ್ ಒಕ್ಕೂಟದ ಬೆಂಬಲದಿಂದ ಅಮೆರಿಕದ ಯೋಜನೆಯನ್ನು ನಿರ್ನಾಮಗೊಳಿಸಲಾಗುತ್ತಿದೆ. ಆರ್ಥಿಕ ರಂಗದಲ್ಲಿ, ಹೊಸ ವಿಶ್ವ ಆರ್ಥಿಕ ವ್ಯವಸ್ಥೆಗಾಗಿ ಮೂರನೇ ಜಗತ್ತು ನಡೆಸುತ್ತಿರುವ ಹೋರಾಟ ತಡೆಯಿಲ್ಲದೆ ಮುಂದುವರೆಯುತ್ತಿದೆ. ಜನತೆಯ ಮುನ್ನಡೆಯಲ್ಲಿ ಜಿಂಬಾಬ್ವೆ ವಿಜಯ ಹೊಸ ಹೆಜ್ಜೆಯಾಗಿದೆ.

ಸಮಾಜವಾದಿ ವಲಯದಲ್ಲಿನ ವಿರೋಧಾಭಿಪ್ರಾಯಗಳು, ಅನೈಕ್ಯತೆ ಮತ್ತು ಸಶಸ್ತ್ರ ಹೋರಾಟಗಳು, ಸಾಮ್ರಾಜ್ಯಶಾಹಿಯು ಸ್ವಾತಂತ್ರ್ಯ ಮತ್ತು ಪ್ರಗತಿಯ ಶಕ್ತಿಗಳ ಮೇಲೆ ಆಕ್ರಮಣ ಮಾಡುವುದರಲ್ಲಿ ಸಹಾಯ ಮಾಡಿವೆ. ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿನ ಈ ವಿರಸ ಬೆಳವಣಿಗೆಯಿಂದ ಸಾಮ್ರಾಜ್ಯಶಾಹಿ ವಿರೋಧಿ ಮುನ್ನಡೆ ಖಂಡಿತ ವಿಳಂಬವಾಗಿದೆ. ಇದು ಹೀಗೆ ಇರದೆ ಇದ್ದಿದ್ದರೆ, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ಮುನ್ನಡೆಯು ಇನ್ನೂ ಹೆಚ್ಚಾಗಿರುತ್ತಿದ್ದು, ಫಲಿತಾಂಶಗಳು ಇನ್ನೂ ವೈಶಿಷ್ಟ್ಯಪೂರ್ಣವಾಗಿ ಮಹತ್ವಾಗಿ ಇರುತ್ತಿತ್ತು.

ಆದರೆ ಇತಿಹಾಸದ ವಸ್ತುನಿಷ್ಠ ಪ್ರಕ್ರಿಯೆಯನ್ನು ತಲೆಕೆಳಗು ಮಾಡಲು ಆಗುವುದಿಲ್ಲ. ರಾಷ್ಟ್ರೀಯ ವಿಮೋಚನಾ ಚಳುವಳಿಗಳ ಗೆಲುವುಗಳನ್ನು ತಡೆಯಲು ಆಗುವುದಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು, ಸಮಾಜವಾದಿ ಶಕ್ತಿಗಳು ಬಲಿಷ್ಠವಾಗುವುದನ್ನು ನಿಲ್ಲಿಸಲಾಗುವುದಿಲ್ಲ. ಜಿಂಬಾಬ್ವೆಯ ವಿಜಯ ಇದನ್ನು ಮತ್ತೆ ಸಮರ್ಥಿಸಿದೆ.

ಕಠಿಣಹೋರಾಟದ ನಂತರ ಗೆಲವು:

ಇದು ಕಠಿಣವಾದ ಹೋರಾಟದ ನಂತರ ಪಡೆದ ಗೆಲುವಾಗಿದೆ. ಬ್ರಿಟಿಷ್ ಸಾಮ್ರಾಜ್ಯವಾದಿಗಳು ಮತ್ತು ಬಿಳಿಜನಾಂಗವಾದಿಗಳು, ಇತರ ಸಾಮ್ರಾಜ್ಯವಾದಿಗಳ ಬೆಂಬಲದಿಂದ, ರೊಡೇಷಿಯ ತಮ್ಮ ಕೈತಪ್ಪಿ ಹೋಗುವುದನ್ನು ತಡೆಯಲು ಸಾಕಷ್ಟು ಪ್ರಯತ್ನ ಮಾಡಿದರು.

ರೊಡೇಸಿಯ ಇಂಥ ತೀವ್ರಹೋರಾಟದ ಕಣವಾದದ್ದರ ಕಾರಣ ಎಂದರೆ, ಬ್ರಿಟನ್, ಅಮೆರಿಕ ಮತ್ತಿತರ ನ್ಯಾಟೋ ದೇಶಗಳು ಮತ್ತು ಜನಾಂಗವಾದಿ ದಕ್ಷಿಣ ಆಫ್ರಿಕದ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳು ರೊಡೇಸಿಯದ ಜೊತೆ ಬಲವಾಗಿ ಹೆಣೆದುಕೊಂಡಿವೆ.

ಗಣಿ ಉದ್ಯಮಕ್ಕೆ ಒಂದು ವಿನಾಯ್ತಿಯ ಮೂಲಕ, ತೊಂಬತ್ತು ವರ್ಷಗಳ ಹಿಂದೆ ಸಿಸಿಲ್‌ರೋಡ್ಸ್, ಈ ದೇಶವನ್ನು ವಶಪಡಿಸಿಕೊಳ್ಳಲು ಆರಂಭಮಾಡಿದನು. (ರೊಡೇಸಿಯ ಎಂದು ಇವನ ಹೆಸರನ್ನೇ ಬ್ರಿಟಿಷರು ಇಟ್ಟರು).

ಬ್ರಿಟನ್ನಿನ ಲಾರ್ಡ್ಸ್ ಸಭೆಯಲ್ಲಿ, ರೊಡೇಸಿಯದಲ್ಲಿ ಜಮೀನು ಹೊಂದಿಲ್ಲದ, ಗಣಿ ಕೈಗಾರಿಕೆಯಲ್ಲಿ ಷೇರುಗಳನ್ನು ಹೊಂದಿಲ್ಲದ ಮತ್ತು ಆಫ್ರಿಕನ್ ವಸಾಹತಿನ ಇತರ ಕಂಪೆನಿಗಳಲ್ಲಿ ಷೇರು ಹೊಂದಿಲ್ಲದ ಶ್ರೀಮಂತ ಕುಟುಂಬವೇ ಇಲ್ಲ. ರೊಡೇಸಿಯದಲ್ಲಿ ಬ್ರಿಟನ್ನಿನ ಬಾಲಬುಡುಕರಾದ ಶ್ರೀಮಂತ ಕುಟುಂಬಗಳೇ ಹೆಚ್ಚಾಗಿವೆ.

ಬ್ರಿಟಿಷ್ ಆಸಕ್ತಿಗಳು :

ಈ ಕುಟುಂಬಗಳ ಶ್ರೀಮಂತರು ಬ್ರಿಟಿಷರ ಹಿಂದೆ ಯಾಕೆ ಓಡಾಡುತ್ತಾರೆ? ರೊಡೇಸಿಯದಲ್ಲಿ ಬ್ಯಾಂಕುಗಳು, ಕಂಪನಿಗಳು ಮತ್ತು ಇತರ ಉದ್ಯಮಗಳನ್ನು ನಡೆಸುವವರ ದೊಡ್ಡ ಪಟ್ಟಿಯೇ ಅವರದಾಗಿದೆ, ಆದ್ದರಿಂದಲೇ ಅವರು ಬ್ರಿಟಿಷರ ಹಿಂದೆ ಇದ್ದಾರೆ. ಇವರ ಅನೇಕ ಉದ್ಯಮಗಳು ರೊಡೇಸಿಯದಲ್ಲಿದೆ. ಆದ್ದರಿಂದಲೇ ಇವರೆಲ್ಲ ಬಿಳಿಯರ ಅಧಿಕಾರಕ್ಕೆ ಬೆಂಬಲ ಕೊಡುತ್ತಿದ್ದರು.

ಲ್ಯಾಂಕಾಸ್ಟರ್ ಒಪ್ಪಂದದ ಸಭೆಯ ನೇತೃತ್ವ ವಹಿಸಿದ್ದ ಲಾರ್ಡ್ ಕಾರಿಂಗ್‌ಟನ್ ಅವರೇ ಎರಡು ಬ್ಯಾಂಕುಗಳ ಡೈರೆಕ್ಟರ್ ಆಗಿದ್ದರು. ಅತ್ಯಂತ ಲಾಭತರುತ್ತಿದ್ದರಿಂದ ಇಂಥ ಶ್ರೀಮಂತರೆಲ್ಲ ರೊಡೇಸಿಯದಲ್ಲಿ ಸಾಕಷ್ಟು ಹಣ ತೊಡಗಿಸಿದ್ದರು. ಬಿಳಿಯ ಕೆಲಸಗಾರರಿಗೆ ಕೊಡುತ್ತಿದ್ದರಲ್ಲಿ ತೀರ ಕನಿಷ್ಠ ಪ್ರಮಾಣದಲ್ಲಿ ಆಫ್ರಿಕನ್ ಕೆಲಸಗಾರರಿಗೆ ಕೊಡಲಾಗುತ್ತಿತ್ತು.

ಲಾಭಗಳು ಅಪಾರವಾಗಿದ್ದವು. ಕಳೆದ ಹತ್ತು ವರ್ಷಗಳಲ್ಲಿ ಖಾಸಗಿ ಕೈಗಾರಿಕೆ ಉದ್ಯಮಗಳ ಲಾಭಗಳು ಮೂರುವರೆ ಪಟ್ಟು ಹೆಚ್ಚಿವೆ ಬ್ಯಾಂಕುಗಳ ಲಾಭ ಐದು ಪಟ್ಟು ಹೆಚ್ಚಿವೆ.

ಸಾಮ್ರಾಜ್ಯವಾದಿಯನ್ನು, ವಸಾಹತುಶಾಹಿಯನ್ನು ರಕ್ಷಿಸುವುದಲ್ಲದೆ, ಈ ಲಾಭಗಳನ್ನು ಕಾಪಾಡುವ ಉದ್ದೇಶ ಕೂಡ ಮುಖ್ಯವಾಗಿತ್ತು. ರೊಡೇಸಿಯದ ಹೋರಾಟದ ತೀವ್ರತೆಯನ್ನು ಇದೇ ಸ್ಪಷ್ಟಪಡಿಸುತ್ತದೆ.

ಇಯಾನ್ ಸ್ಮಿತ್‌ರ ಘೋಷಣೆ :

1965ರಲ್ಲಿ ಇಯಾನ್ ಸ್ಮಿತ್‌ರು ಯೂನಿಲಾಟರಲ್ ಡಿಕ್ಲರೇಷನ್ ಆಫ್ ಇಂಡಿಪೆನ್‌ಡೆನ್ಸ್ ಘೋಷಿಸಿದಾಗ ಈ ಎಲ್ಲ ಉದ್ಯಮಗಳಿಗೆ ವಿನಾಯ್ತಿಕೊಟ್ಟುದಲ್ಲದೆ ಇವರೆಲ್ಲರ ಜೊತೆ ಸಖ್ಯವನ್ನೂ ಹೆಚ್ಚಿಸಿಕೊಂಡರು. ಈ ಘೋಷಣೆಯನ್ನು ಬ್ರಿಟಿಷ್ ಸರ್ಕಾರ "ದಂಗೆಕೋರ" ಎಂದು ಕರೆದರೂ ಇಯಾನ್ ಸ್ಮಿತ್ ಅದಕ್ಕೆ ಹೆದರಬೇಕಾಗಿರಲಿಲ್ಲ. ಈ ದಂಗೆಯ ನಾಯಕನು "ಶರಣಾಗು"ವಂತೆ ಮಾಡಲು ಸರ್ಕಾರ ಪ್ರಯತ್ನಿಸಿತು. ಆದರೆ ಸ್ಮಿತ್ ದೃಢವಾಗಿದ್ದಾಗ ಬ್ರಿಟಿಷ್ ಸರ್ಕಾರ ದಂಗೆಯನ್ನು ಮರೆಯಿತು.

ಅಷ್ಟೇ ಅಲ್ಲ ಮುಂದಿನ ಹದಿನೈದು ವರ್ಷಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಸ್ಮಿತ್‌ಗೆ ಎಲ್ಲ ಸಹಾಯವನ್ನೂ ಕೊಟ್ಟರು. ಉದ್ಯಮಿಗಳಿಗೆ ಎಲ್ಲ ಸ್ವಾತಂತ್ರ್ಯ ಸಿಕ್ಕಿತು

ಸಶಸ್ತ್ರ ಹೋರಾಟದ ಆರಂಭ :

ರೊಡೇಸಿಯದ ಸಮಸ್ಯೆಗೆ ಬ್ರಿಟಿಷರು ಪರಿಹಾರ ಹುಡುಕುವರೆಂದು ಕಾದರೆ ಎಂದೆಂದೂ ಕಾಯುತ್ತಲೇ ಇರಬೇಕು. ಆದ್ದರಿಂದ ಕರಿಯರು ತಮ್ಮ ಅದೃಷ್ಟವನ್ನು ತಾವೇ ರೂಪಿಸಿಕೊಳ್ಳಲು ಯತ್ನಿಸಿದರು. ಮೊದಲು ಮುಗಾಬೆ, ನಂತರ ಕೋಮೋರಿಂದ ಸಶಸ್ತ್ರ ಹೋರಾಟ ಆರಂಭವಾಯಿತು. ಜನಾಂಗವಾದಿ ಅಲ್ಪಸಂಖ್ಯಾತರು ಸೃಷ್ಟಿಸಿದ ಸನ್ನಿವೇಶಕ್ಕೆ ತಕ್ಕಂತೆ ಸಶಸ್ತ್ರ ಹೋರಾಟ ಆರಂಭವಾಯಿತೆಂದು ಮುಗಾಬೆ ಹವಾನ ಅಧಿವೇಶನದಲ್ಲಿ ಹೇಳಿದರು.

20,000 ಕರಿಯರು ಸತ್ತರು, 2 ಮಿಲಿಯ ಜನ ನಿರಾಶ್ರಿತರಾದರು. ಏಳುವರ್ಷಗಳ ಸಾಯುಧ ಹೋರಾಟ ಬಿಳಿಯರಲ್ಲಿ ನಡುಕ ಹುಟ್ಟಿಸಿತು. ಪ್ರತಿ ತಿಂಗಳು ನೂರಾರು ಬಿಳಿಯರು ರೊಡೇಸಿಯದಿಂದ ಹೊರಬಿದ್ದರು. ದೇಶದ ಮೂರನೇ ಒಂದು ಭಾಗ ಕರಿಯರ ವಶವಾಯಿತು.

ಸಾಮ್ರಾಜ್ಯವಾದಿ ಉಪಾಯ :

ಈ ಸನ್ನಿವೇಶದಲ್ಲಿ, ಸಾಮ್ರಾಜ್ಯವಾದಿಗಳ ಬೆಂಬಲ ಪಡೆದ ಬಿಳಿ ಜನಾಂಗವಾದಿಗಳು, ತಮ್ಮ ಸ್ಥಾನ ಕಾಪಾಡಿಕೊಳ್ಳಲು ಹೊಸ ತಂತ್ರ ಹೂಡಿದರು. ಮುಜೊರೆವ ಸಿತೋಲ್, ಚಿರಾವು ಮುಂತಾದ ಆಫ್ರಿಕದ ಕೈಗೊಂಬೆ ನಾಯಕರನ್ನು ಹಿಡಿದು 1978ರ ಮಾರ್ಚಿ 3ರಂದು ಸಂವಿಧಾನಾತ್ಮಕ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡರು. ಇದರಿಂದ ಮುಜೊರೆವ ಕೈಗೊಂಬೆ ಪ್ರಧಾನಿಯಾದರೂ, ಅಧಿಕಾರವನ್ನು ಬಿಳಿಯರೇ ಉಳಿಸಿಕೊಂಡರು.

ಸಂಧಾನ ಮತ್ತು ಒಪ್ಪಂದ :

ಇಯಾನ್‌ಸ್ಮಿತ್-ಮುಜೊರೆವ ಆಳ್ವಿಕೆಯನ್ನು ಸ್ಥಿರಪಡಿಸುವ ಹುಸಿ ಚುನಾವಣೆಯನ್ನು ದೇಶಪ್ರೇಮಿ ರಂಗ ತಿರಸ್ಕರಿಸಿತು. ಸಶಸ್ತ್ರ ಹೋರಾಟ ಇನ್ನಷ್ಟು ಹೆಚ್ಚಿತು. ಲಾಂಕಸ್ಟರ್ ಭವನದಲ್ಲಿ 102 ದಿನ ಅಧಿವೇಶನ ನಡೆದು, ದೇಶಪ್ರೇಮಿ ರಂಗದ ನಾಯಕರು ಕರಿಯ ಬಹುಸಂಖ್ಯಾತ ಆಳ್ವಿಕೆಯನ್ನೇ ಪಟ್ಟುಹಿಡಿದರು.

ಸಾಮ್ರಾಜ್ಯವಾದಿ ಲೆಕ್ಕಾಚಾರ :

ಲಾಂಕಾಸ್ಟರ್ ಒಪ್ಪಂದ ಪ್ರಕಾರ ಚುನಾವಣೆ ನಡೆದು ಯಾವ ಆಫ್ರಿಕನ್ ಪಕ್ಷವೂ ಹೆಚ್ಚು ಸ್ಥಾನ ಗಳಿಸುವುದಿಲ್ಲವೆಂದು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಲೆಕ್ಕಾಚಾರ ಹಾಕಿದರು. ಆದರೆ ಚುನಾವಣೆ ನಡೆದು ಮುಗಾಬೆ ಮತ್ತು ಕೋಮೋರ ಪಕ್ಷಗಳು ಅಧಿಕ ಸ್ಥಾನಗಳಿಸಿವೆ. ಈಗ ಮುಗಾಬೆಗೆ ಸರ್ಕಾರ ವಹಿಸದೆ ವಿಧಿಯಿಲ್ಲ. ಜಿಂಬಾಬ್ವೆಯ ವಿಜಯ, ಹೋರಾಡುತ್ತಿರುವ ಇತರ ಆಫ್ರಿಕನ್ ದೇಶಗಳಿಗೆ ಸ್ಫೂರ್ತಿ ನೀಡುವುದರಲ್ಲಿ ಸಂಶಯವಿಲ್ಲ. ಜನಾಂಗವಾದಿಗಳಿಗೆ ಇನ್ನು ಉಳಿವಿಲ್ಲ.

○

"ಬೆಂಗಳೂರು ಸಾಫ್ಟ್ ಡ್ರಿಂಕ್ಸ್ (ಟೊರಿನೊ) ಕಾರ್ಮಿಕರ ಮುಷ್ಕರ"

ಬೆಂಗಳೂರಿನಲ್ಲಿರುವ ಟೊರಿನೊ ಕಾರ್ಮಿಕರು ತಾ. 4-3-80ರಿಂದ ಅನಿರ್ದಿಷ್ಟ ಕಾಲ ಮುಷ್ಕರವನ್ನು ಮಾಡುತ್ತಿದ್ದಾರೆ. ಸಂಘದ ಬೇಡಿಕೆಗಳನ್ನು ಜನವರಿಯಲ್ಲಿ ಸಲ್ಲಿಸಿದರೂ ಇಲ್ಲಿಯವರೆಗೂ ಯಾವ ತೀರ್ಮಾನ ಮಾಡದ ಕಾರಣ ವಿಧಿ ಇಲ್ಲದೆ ಕಾರ್ಮಿಕರು ಅನಿರ್ದಿಷ್ಟ ಕಾಲದ ಮುಷ್ಕರವನ್ನು ಮಾಡುತ್ತಿದ್ದಾರೆ. ಇದಕ್ಕೆ ಮಧ್ಯೆ ಪೋಲೀಸಿನವರು ಕಾರ್ಮಿಕರ ಮೇಲೆ ಲಾಟೀಚಾರ್ಜು ಮಾಡಿ" ಅನೇಕ ಕಾರ್ಮಿಕರಿಗೆ ಭಾರಿ ಹೊಡೆತದಿಂದ ಕಾರ್ಮಿಕರಿಗೆ ಗಾಯಗಳಾಗಿವೆ. ಕಾರ್ಮಿಕರು ಪೋಲೀಸಿನವರ ನೀಚತನವನ್ನು ಖಂಡಿಸಿ, ನ್ಯಾಯಾಂಗ ವಿಚಾರಣೆಯಾಗಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಲಾಗಿದೆ, ಇದಕ್ಕೆ ಮುಂದೆಲ್ಲ ಕಾನೂನು ಬಾಹಿರ ಎಲ್ಲಾ ಕಾರ್ಮಿಕರನ್ನು ರಿಟ್ರೆಂಚ್ ಮಾಡಲಾಗಿದೆ. ಇದನ್ನು ಸಂಘ ಖಂಡಿಸಿ ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡು ಕಾರ್ಮಿಕರ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಮೆನೇಜ್‌ಮೆಂಟಿನವರ ಮೇಲೆ ಒತ್ತಾಯ ಮಾಡಲಾಗಿದೆ.

●

‘ಸರ್ಕಾರವೇ ಸರ್ವಸ್ವ ಎಂದು ತಿಳಿದವರು ನಾವಲ್ಲ’

ಸರ್ಕಾರವೇ ಸರ್ವಸ್ವವೂ ಆಗಿದೆ ಎಂದು ತಿಳಿದವರು ನಾವಲ್ಲ. ಹಿಂದೆಯೂ ನಾವು ಜನತೆಯೊಡನೆ ಬದುಕಿದ್ದೇವೆ, ಈಗಲೂ ಬದುಕುತ್ತಿದ್ದೇವೆ, ಮುಂದೆಯೂ ದುಡಿಯುವ ಜನತೆಯೊಂದಿಗೆ ಬದುಕುವ ಪಕ್ಷ ನಮ್ಮದು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್ ಘೋಷಿಸಿದರು.

ಭಾರತೀಯ ಸಮಾಜ ವಿಜ್ಞಾನಗಳ ಶಾಲೆಯ ಬೆಂಗಳೂರು ಘಟಕವು ಮಾರ್ಚ್ 29ರಂದು ಏರ್ಪಡಿಸಿದ್ದ “ಕೇಂದ್ರ ರಾಜ್ಯ ಸಂಬಂಧಗಳಲ್ಲಿಯ ಪ್ರಸ್ತುತ ನೆಲೆಗಳು” ಎಂಬ ವಿಚಾರ ಸಂಕಿರಣದ ಮುಖ್ಯ ಉಪನ್ಯಾಸಕರಾಗಿ ಇ. ಎಂ. ಎಸ್. ಮಾತನಾಡುತ್ತಿದ್ದರು.

ಕೇಂದ್ರ ಸರ್ಕಾರವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿನ ಪ. ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳ ಸರ್ಕಾರಗಳನ್ನು ಆ ರಾಜ್ಯಗಳಲ್ಲಿ ಗಲಭೆಯುಂಟುಮಾಡಿ ಕಾನೂನು ಪಾಲನೆಯ ನೆಪ ಮುಂದೊಡ್ಡಿ ವಜಾ ಮಾಡಬಹುದೆಂಬ ಶಂಕೆ ವ್ಯಕ್ತಪಡಿಸಿದ ನಂಬೂದಿರಿಪಾದರು ತಮ್ಮ ಸರ್ಕಾರಗಳು ಆಕಸ್ಮಿಕವಾಗಿ ಬಂದವುಗಳಲ್ಲ ಎಂದರು. ಅಥವಾ ಯಾವುದೇ ಯುಕ್ತಿಯಿಂದಲೂ ನಾವು ಸರ್ಕಾರಕ್ಕೆ ಬಂದವರಲ್ಲ. ದೀರ್ಘಕಾಲ ಅತ್ಯಂತ ನೋವುಗಳ ಹೋರಾಟದಿಂದ ನಾವು ಸರ್ಕಾರಕ್ಕೆ ಬಂದಿದ್ದೇವೆ ಎಂದು ನುಡಿದ ಇ. ಎಂ. ಎಸ್. ರು ಹೋರಾಟಗಳಲ್ಲಿ ನಮ್ಮೊಂದಿಗಿದ್ದ ಜನತೆಯೇ ನಮ್ಮನ್ನು ರಕ್ಷಿಸುತ್ತಾರೆ ಎಂದು ಸೂಚ್ಯವಾಗಿ ಹೇಳಿದರು.

ಬಲಿಷ್ಟ ಕೇಂದ್ರ ಸರ್ಕಾರಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ಸಾರಿದ ಮಾರ್ಕ್ಸ್‌ವಾದಿ ನಾಯಕರು, ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ ಮುಂತಾದುವು ರಾಜ್ಯ ಸರ್ಕಾರಗಳ ಪಾಲಿಗೆ ಪೂರ್ಣವಾಗಿ ಇರಬೇಕಾದ ಇಲಾಖೆಗಳೆಂದರು.

ಸಾರ್ವಜನಿಕ ಚರ್ಚೆ :

ಕಳೆದ ಎಲ್ಲಾ ಯೋಜನೆಗಳಿಂದ ದುಡಿಯುವ ಜನತೆಗೆ ಯಾವ ಉಪಯೋಗವೂ ಆಗಲಿಲ್ಲ ಎಂಬುದು ದೇಶದ ಅನುಭವ. ಆದ್ದರಿಂದ ಮೂಲಭೂತವಾಗಿ ಯೋಜನೆಗಳಲ್ಲೇ ದೋಷವಿದೆ ಎಂದು ಸಾಬೀತಾಯಿತು. ಈ ದೇಶವೇನು ? ತಮಗೆ ಏನುಬೇಕು-ಏನುಬೇಡ ಎಂಬುದನ್ನು ಜನ ಸಾರ್ವಜನಿಕವಾಗಿ ಚರ್ಚಿಸಲಿ ಎಂದರು ಇ. ಎಂ. ಎಸ್. ಈ ನಿಟ್ಟಿನಲ್ಲಿ ಪರ್ಯಾಯ ಯೋಜನೆಯೊಂದನ್ನು ಇಷ್ಟರಲ್ಲೇ ತಮ್ಮ ಪಕ್ಷದ ನೇತೃತ್ವದ ಕೇರಳ, ಬಂಗಾಳ ಮತ್ತು ತ್ರಿಪುರ ಸರ್ಕಾರಗಳು ತಯಾರಿಸಲಿವೆ. ಈ ಯೋಜನೆಯ ಚರ್ಚೆಗೆ ರಾಷ್ಟ್ರದ ಜನತೆಯ ಮುಂದೆ ತಾವಿಡುತ್ತೇವೆ. ಆ ಚರ್ಚೆಯಲ್ಲಿ ಪಾಲ್ಗೊಂಡು ಸಹಕರಿಸಬೇಕೆಂದು ಇ. ಎಂ. ಎಸ್. ರು ಜನತೆಗೆ, ಅರ್ಥಶಾಸ್ತ್ರಜ್ಞರಿಗೆ, ಕೃಷಿ ಪಂಡಿತರಿಗೆ, ಬುದ್ಧಿಜೀವಿಗಳಿಗೆ ಹಾಗೂ ಇತರ ಪರಿಣಿತರಿಗೆ ಕರೆಕೊಟ್ಟರು.

ಭಾರತ ಮತ್ತೆ ತುಂಡಾಗಲಿದೆ :

ತಾವು ಶಾಲಾ ಬಾಲಕರಾಗಿದ್ದಾಗ ಈದಿನ ಬರ್ಮಾ ಪ್ರದೇಶವು ಭಾರತದಿಂದ ಕಿತ್ತುಹೋಯಿತು, ಯುವಕರಾಗಿದ್ದಾಗ ಪಾಕಿಸ್ತಾನ ಕಿತ್ತುಹೋಯಿತು, ಈ ನನ್ನ 70ನೇ ವಯಸ್ಸಿನಲ್ಲಿ ಭಾರತದ ಈಶಾನ್ಯ ಭಾಗ ಮತ್ತೆ ಕಿತ್ತು ಹೋಗುತ್ತಿದೆಯೇ ಎಂಬುದು. ಅಲ್ಲಿನ ಇತ್ತೀಚಿನ ವಿದ್ಯಮಾನವಾಗಿದೆಯಲ್ಲಾ ಎಂದು ಮನನೊಂದು ನುಡಿದ ನಂಬೂದಿರಿಪಾದರು ಇದು ರಾಜಕೀಯದ ಪ್ರಶ್ನೆಯಾಗಿದೆ ಎಂದರು. ಅಗ್ಗದ ಜನಪ್ರಿಯತೆ ಗಿಟ್ಟಿಸಲು, ಎಡ ಶಕ್ತಿಗಳು ಬಲಿಷ್ಟವಾಗಿರುವ ಬಂಗಾಳದಲ್ಲಿ ತಮಗೆ ನೆಲೆಯೊಂದನ್ನು ಗಿಟ್ಟಿಸಲು ಕಾಂಗ್ರೆಸ್(ಐ) ಪಕ್ಷವು ನಡೆಸುತ್ತಿರುವ ಹೀನ ಪ್ರವೃತ್ತಿಯನ್ನು ಉಗ್ರವಾಗಿ ಖಂಡಿಸಿದ ಇ.ಎಂ.ಎಸ್., ಕಾಂಗ್ರೆಸ್(ಐ) ಪಕ್ಷವು ನಿಮ್ಮ ಹಿಡಿತದಲ್ಲಿದೆಯೇ ಎಂದು ಇಂದಿರಾಗಾಂಧಿಗೆ ಪ್ರಶ್ನಿಸಿದರು.

ಅಸ್ಸಾಂ ಚಳುವಳಿಗೆ ಇಂದಿರಾಗಾಂಧಿಯವರನ್ನು ನೇರಹೊಣೆಗಾರರನ್ನಾಗಿ ಚರಿತ್ರೆ ಮಾಡಲಿದೆ ಎಂದು ಎಚ್ಚರಿಸಿದ ನಂಬೂದಿರಿಪಾದ್, ಬಿಕ್ಕಟ್ಟಿನ ಇತ್ಯರ್ಥ ಈಗಲೂ ಸಾಧ್ಯವಿದೆ, ಇದಕ್ಕೆ ಪ್ರಧಾನಮಂತ್ರಿ ಮತ್ತು ಕಾಂಗ್ರೆ ಪಕ್ಷದ ಅಧ್ಯಕ್ಷೆಯೂ ಆಗಿರುವ ಇಂದಿರಾಗಾಂಧಿಯವರು ದೇಶಾಭಿಮಾನಿ ಮತ್ತು ರಾಷ್ಟ್ರೀಯ ನಿಲುವನ್ನು ತಳೆದು ತನ್ನ ಪಕ್ಷವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದರು.

ದುಂಡುಮೇಜಿನ ಸಮ್ಮೇಳನ :

ಹಿಂದ್ ಮಜ್‌ದೂರ್ ಸಭಾದ ಅಧ್ಯಕ್ಷರೂ ಮತ್ತು ವಿಧಾನಪರಿಷತ್ ಸದಸ್ಯರೂ ಆದ ಎಸ್. ವೆಂಕಟರಾಮ್ ಅವರು ಮಾತನಾಡಿ ರಾಷ್ಟ್ರದ ಒಕ್ಕೂಟ ಸ್ವರೂಪವು ಸಂಪೂರ್ಣವಾಗಿ ನಾಶವಾಗಿದೆ ಎಂದರು. ಪ್ರಾಂತೀಯ ಪಕ್ಷಗಳು ಅಥವ ರಾಷ್ಟ್ರೀಯ ಪಕ್ಷಗಳ ಪ್ರಾಂತೀಯ ಶಾಖೆಗಳು 7–8ರಾಜ್ಯಗಳಲ್ಲಿ ಬಲಿಷ್ಟವಾಗಿರುವುದು ನಮ್ಮ ಜನರ ಫೆಡರಲ್ ಸ್ವರೂಪದ ಒತ್ತಾಸೆಯನ್ನು ತೋರಿಸುತ್ತದೆ ಎಂದು ನುಡಿದ ವೆಂಕಟರಾಮ್ ರಾಷ್ಟ್ರದ ಒಕ್ಕೂಟ ಸ್ವರೂಪಕ್ಕೆ ಧಕ್ಕೆ ಬಂದಾಗ ರಾಷ್ಟ್ರ ಒಂದಾಗಿ ಉಳಿಯಲು ಸಾಧ್ಯವಾಗದಂತಹ ಪರಿಸ್ಥಿತಿ ಯಾಗುತ್ತದೆಂದರು.

ಜನತಂತ್ರ ಉಳಿಯಬೇಕಾದರೆ ನಮ್ಮ ಫೆಡರಲ್ ಸ್ವರೂಪದ ಉಳಿವಿಕೆ ಅಗತ್ಯವೆಂದ ವೆಂಕಟರಾಮ್ ಕೇಂದ್ರ ರಾಜ್ಯ ಸಂಬಂಧಗಳ ಪುನರ್ ವಿಮರ್ಶೆಯಾಗಬೇಕು ಎಂದು ಆಗ್ರಹಪಡಿಸಿದರು. ಸಂಪನ್ಮೂಲಗಳ ಮರು ಹೊಂದಾಣಿಕೆಯೂ ಆಗಬೇಕೆಂದು ಒತ್ತಾಯಿಸಿದ ಕಾರ್ಮಿಕ ನಾಯಕ ವೆಂಕಟರಾಮ್ ಈ ಎಲ್ಲ ವಿಷಯಗಳ ಕೂಲಂಕುಷ ಚರ್ಚೆಗೆ ಕೇಂದ್ರ ಸರ್ಕಾರವು ದುಂಡುಮೇಜಿನ ಸಮ್ಮೇಳನವೊಂದನ್ನು ಕರೆಯಬೇಕೆಂದು ಒತ್ತಾಯಿಸಿದರು.

ಜನತಾ ಪಕ್ಷದ ಶಾಸಕ ಲಕ್ಷ್ಮಿಸಾಗರ್ ಮಾತನಾಡಿ ಕೇಂದ್ರ ಸರ್ಕಾರದ ವಿಪರೀತ ಅಧಿಕಾರದ ವಿರುದ್ಧ ಶ್ರೇಷ್ಟನ್ಯಾಯಾಲಯಕ್ಕೆ ಮನವಿ ಮಾಡಬೇಕು ಮತ್ತು ಜನತೆಯೂ ಸಹ ಸಂಘಟಿತರಾಗಿ ಕೇಂದ್ರದ ವಿರುದ್ಧ ಹೋರಾಡಬೇಕೆಂದರು.

ರಾಜ್ಯಾಂಗದ ಮೂಲ ದೋಷ:

ಕೇಂದ್ರ ಮತ್ತು ರಾಜ್ಯಗಳ ನಡುವಿನ ವಿವಾದ ಈಗ ಎದ್ದ ಸಮಸ್ಯೆಯಲ್ಲ. ಇದು ಬಹಳ ಹಿಂದಿನಿಂದಲೂ ಇದೆ ಎಂದರು ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್ ಆರ್. ಎನ್. ಬೈರಾರೆಡ್ಡಿ. ರಾಜ್ಯಾಂಗ ರಚನೆ ಮಾಡಿದವರೇ ಮೂಲ ದ್ರೋಹವೆಸಗಿ ತಪ್ಪು ಮಾಡಿದ್ದಾರೆ ಎಂಬ ಗಂಭೀರ ಆರೋಪ ಇವರಿಂದ.

ವಿಭಿನ್ನ ಸಂಸ್ಕೃತಿ, ಭಾಷೆ ಇರುವ ಇಂತಹ ದೊಡ್ಡ ದೇಶದಲ್ಲಿ ಒಕ್ಕೂಟ ಸರ್ಕಾರ ಇರುವುದು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟ ಅವರು ನಿಜವಾದ ಫೆಡರಲ್ ಸರ್ಕಾರವೇ ಸುಭದ್ರ ಸರ್ಕಾರ ಎಂದರು.

ಸಂವಿಧಾನೇತರ ದುಷ್ಟಕೂಟವೊಂದರಿಂದ ಇಂದು ದೇಶಕ್ಕೆ ಅಪಾಯ ಒದಗಿಬಂದಿದೆ ಎಂದು ಎಚ್ಚರಿಸಿದ ಬೈರಾರೆಡ್ಡಿ ಇದರ ವಿರುದ್ಧ ಜನರ ಸಂಘಟಿತ ಹೋರಾಟವಲ್ಲದೆ ಬೇರೆ ಉತ್ತರವೇ ಇಲ್ಲ ಎಂದರು. ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧದ ಬಗ್ಗೆ ಪರಿಣಿತ ಸಮಿತಿಯೊಂದರಿಂದ ಆಳ ಅಧ್ಯಯನದ ಅಗತ್ಯವಿದೆ ಎಂದೂ ಅವರು ಹೇಳಿದರು.

ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸಿ ಕಿಕ್ಕಿರಿದು ನೆರೆದಿದ್ದ ಸಭಿಕರನ್ನು ಸ್ವಾಗತಿಸಿದ ಶಾಲೆಯ ನಿರ್ದೇಶಕ ಡಿ. ಆರ್. ನಾಗರಾಜ್ ಮಾತನಾಡಿ ಪ್ರಜಾಸತ್ತೆಯ ಉಳಿವಿಗೆ ಪ್ರಜೆಗಳ ಬೆಳವಣಿಗೆಗೆ ಸಂವಿಧಾನದ ಪುನರ್ ವಿಶ್ಲೇಷಣೆಯಾಗಬೇಕೆಂದರು.

50 ಸರ್ಕಾರಗಳ ವಿಸರ್ಜನೆ :

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಛೇರ್ಮನ್ ಪ್ರೊ. ಬಿ. ಕೆ. ಚಂದ್ರಶೇಖರ್ ಮಾತನಾಡಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ 50 ಸರ್ಕಾರಗಳನ್ನು ಕೇಂದ್ರವು ಇಲ್ಲಿವರೆಗೆ ವಿಸರ್ಜಿಸಿದೆ ಎಂದರು. 1965ರಲ್ಲಿ ಇ. ಎಂ. ಎಸ್. ನಂಬೂದಿರಿಪಾದ್ ನೇತೃತ್ವದ ಕಮ್ಯುನಿಸ್ಟ್ ಸರ್ಕಾರವು ಪ್ರಥಮ ಬಲಿ ಎಂದ ಚಂದ್ರಶೇಖರ್ ಹೀಗಾದರೆ ಸಂವಿಧಾನದ ಪಾವಿತ್ರತೆ ಎಂದರೇನು ಎಂದು ಪ್ರಶ್ನಿಸಿದರು.

●

ಕಾಫಿ ಕ್ಯೂರಿಂಗ್ ಕಾರ್ಮಿಕರ ಬೇಡಿಕೆ ಈಡೇರಿಕೆ

ಸ್ಥಳೀಯ ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕ ನೌಕರರ ಸಂಬಳ ಹೆಚ್ಚಳದ ಬೇಡಿಕೆಯನ್ನು ಚಿಕ್ಕಮಗಳೂರಿನ ಸಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ ಕ್ಯೂರಿಂಗ್ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಸಲ್ಲಿಸಲಾಗಿತ್ತು. ಈ ಸಂಬಂಧದಲ್ಲಿ ಅನೇಕ ಸುತ್ತಿನ ನೇರ ಸಂಧಾನ ನಡೆದಿದ್ದಾಗ್ಯೂ ಯಾವುದೇ ರೀತಿಯ ಒಪ್ಪಂದಕ್ಕೆ ಆಡಳಿತ ಮಂಡಳಿಗಳು ಬಾರದಿದ್ದ ಕಾರಣದಿಂದ ಕಾರ್ಮಿಕ ನೌಕರರು ಅನಿವಾರ್ಯವಾಗಿ ಮುಷ್ಕರಕ್ಕೆ ಸಿದ್ಧರಾಗಬೇಕಾಯಿತು, ತದನಂತರ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿಯವರ ಪ್ರಯತ್ನದಿಂದ ತಾ॥ 10–3–1980 ರಂದು ಆಡಳಿತ ಮಂಡಳಿಗಳ ಮತ್ತು ಕಾರ್ಮಿಕ ಪ್ರತಿನಿಧಿಗಳ ಮಧ್ಯ ಮುರಿದು ಬಿದ್ದ ನೇರ ಸಂಧಾನವು ಪುನಹ ಪ್ರಾರಂಭವಾಯಿತು, ಆ ಮೇಲೆ ನಿರಂತರವಾಗಿ ಪ್ಲಾಂಟರ್ಸ್ ಅಸೋಸಿಯೇಷನ್‌ರವರ ಕಛೇರಿಯಲ್ಲೂ ಮತ್ತು ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರ ಕಛೇರಿಯಲ್ಲೂ ತಾ॥ 11–3–1980 ಮತ್ತು 12–3–1980 ರಂದು ಸಂಧಾನ ನಡೆದು ತಾ॥ 12–3–1980ರ ಸಂಜೆ 6 ಗಂಟೆಗೆ ಆಡಳಿತ ಮಂಡಳಿಗಳ ಮತ್ತು ಕಾರ್ಮಿಕ ನೌಕರರ ಪ್ರತಿನಿಧಿಗಳ ಮಧ್ಯ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರ ಸಮ್ಮುಖದಲ್ಲಿ ಒಪ್ಪಂದವಾಯ್ತು.

ಈ ಒಪ್ಪಂದದಂತೆ ಕಾಫಿ ಸಂಸ್ಕರಣ ಮಾಡುವ ಒಬ್ಬ ಮಹಿಳಾ ಕಾರ್ಮಿಕಳಿಗೆ ಕೆ.ಜಿ. ಒಂದಕ್ಕೆ ಸಿಗುವ ಮೂಲವೇತನದಲ್ಲಿ ಶೇಕಡ 37.5 ರಷ್ಟು, ದಿನ ಕೂಲಿ ಮಾಡುವ ಕೆಲಸಗಾರರಿಗೆ ದಿನ ಒಂದಕ್ಕೆ ಸಿಗುವ ಮೂಲ ವೇತನದಲ್ಲಿ ಈ ಮೊದಲು ಕೊಡುತ್ತಿದ್ದ 00–50 ಪೈಸೆ ಸೇರಿಸಿ ಪುನಹ ದಿನ ಒಂದಕ್ಕೆ 00-50 ಪೈಸೆಯಂತೆ ಹೆಚ್ಚಿಸಲಾಯಿತು. ತಿಂಗಳ ಸಂಬಳದ ನೌಕರನೊರ್ವನಿಗೆ ತಾ॥ 31–12–1979ರಲ್ಲಿ ಪಡೆಯುತ್ತಿದ್ದ ಮೂಲವೇತನದಲ್ಲಿ ಈ ಮೊದಲು ಕೊಡುತ್ತಿದ್ದ 35-00ರೂಗಳನ್ನು ಸೇರ್ಪಡಿಸಿ ತಾ॥ 1-1-80 ರಿಂದ ಮಾಹೆಯಾನೆ 30/-ರೂಗಳನ್ನು ಹೆಚ್ಚಿಸಲಾಯಿತು. ಈ ರೀತಿ ಹೆಚ್ಚಿಸುವಾಗ 3 ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿದ್ದ ನೌಕರನೋರ್ವನಿಗೆ ಮಾಹೆಯಾನೆ ರೂ. 25/- ಹೆಚ್ಚಿಸಲಾಯಿತು.

3 ವರ್ಷಗಳ ಸೇವೆ ಸಲ್ಲಿಸಿದ್ದ ಒಬ್ಬ ನೌಕರನಿಗೆ ಒಂದು ಕಂತಿನ ಭಡ್ತಿಯಾಗಿಯೂ 6 ವರ್ಷ ಸೇವೆ ಸಲ್ಲಿಸಿದ್ದ ನೌಕರನೋರ್ವನಿಗೆ 2 ಕಂತಿನ ಭಡ್ತಿಯಾಗಿಯೂ ಕೊಡಬೇಕಾಗಿದೆ. ವಾರ್ಷಿಕ ಭಡ್ತಿಯನ್ನು ಪ್ರತಿವರ್ಷವೂ ಜನವರಿ 1ನೇ ತಾರೀಖಿನಂದು ಕೊಡಲಾಗುವುದು. ಮೈಸೂರು ಕಾಫಿ ಕ್ಯೂರಿಂಗ್ ವರ್ಕರ್ಸ್‌ನ ನೌಕರರಿಗೆ ಈವರೆಗೆ ಕೊಡುತ್ತಾ ಬಂದಿರುವ ಸೈಕಲ್ ಭತ್ಯ ರೂ 5/-ಗಳನ್ನು 1-1-1980 ರಿಂದ ಮೂಲವೇತನಕ್ಕೆ ಸೇರಿಸಲಾಗಿದೆ. ಈ ರೀತಿ ಕೊಡುತ್ತಿರುವ ಸವಲತ್ತುಗಳು ತಾ॥ 1-1-80 ರಿಂದ 31-12-1982ರವರೆಗೆ ಜಾರಿಯಲ್ಲಿರುವುದು.

ಮೇಲ್ಕಂಡ ಒಪ್ಪಂದದಂತೆ ಆಡಳಿತ ಮಂಡಳಿಗಳು ಕಾಫಿಕ್ಯೂರಿಂಗ್ ಕಾರ್ಮಿಕ ನೌಕರರಿಗೆ ಕೊಡಬೇಕಾದ ಉಳಿದ ವೇತನ ಮತ್ತು ಕೂಲಿಯನ್ನು ತಾ॥ 15-4-1980ರ ಒಳಗೆ ಕೊಡಲಾಗುವುದು.

ಮೇಲ್ಕಂಡ ಸಂಘವು ತಾ॥ 10-11-1979ರಂದು ಮಂಡಿಸಿದ ಸಂಬಳದ ಬೇಡಿಕೆಯ ಪತ್ರದಲ್ಲಿ ಇರುವ ಸಂಬಳವನ್ನು ಒಳಗೊಂಡ ಎಲ್ಲಾ ಬೇಡಿಕೆಗಳೂ ಈಡೇರಿದಂತಾಗುತ್ತದೆ.

ಕಾರ್ಮಿಕ ನೌಕರರು ತಮ್ಮ ಐಕ್ಯ ಶಕ್ತಿಯಿಂದ ಮತ್ತು ದೃಢ ಮನಸ್ಸಿನಿಂದ ಸಿ ಐ ಟಿ.ಯು. ಸಂಘದ ಆಶ್ರಯದಲ್ಲಿ ಒಮ್ಮತ್ಸಿನಿಂದ ಹೋರಾಟಕ್ಕೆ ಸಿದ್ಧವಾದ್ದುದಕ್ಕೆ ಮೇಲ್ಕಂಡ ರೀತಿಯಲ್ಲಿ ಸವಲತ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಾಯ್ತು. ಆದರೆ ಈ ರೀತಿಯಲ್ಲಿ ದೊರೆತಿರುವ ಸವಲತ್ತುಗಳಿಂದ ಈಗಿನ ತೀವ್ರ ರೀತಿಯ ಬೆಲೆ ಏರಿಕೆಯಿಂದ ಜೀವನ ಮಾಡಲು ಸಂಪೂರ್ಣವಾಗಿ ಸಾಧ್ಯವಾಗುವುದಿಲ್ಲ. ಆದರೂ ಇದೇ ಐಕ್ಯ ಶಕ್ತಿಯನ್ನು ಕಾರ್ಮಿಕ ನೌಕರರು ಸಿ.ಐ.ಟಿ.ಯು. ನೇತೃತ್ವದಲ್ಲಿ ಮುಂದುವರಿಸಿಕೊಂಡು, ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಸಂಘವನ್ನು ಬಲಪಡಿಸಬೇಕೆಂದು ಸಂಘದ ಮುಖಂಡ ಕಾಂ. ಎ.ಕೆ. ವಿಶ್ವನಾಥ್ ಕೇಳಿಕೊಂಡಿರುವರು. ●

ಪುಟ್ಟ ರಾಜ್ಯದಲ್ಲೊಂದು ದೊಡ್ಡ ಪಾರ್ಟಿ

(3ನೇ ಪುಟದಿಂದ)

ದುಡಿದು, ಈಗ ಸಂಜೆ ಕುತ್ತಿಗೆಗೊಂದು ಮಫ್ಲರ್ ಸುತ್ತಿಕೊಂಡು ಬೀಡಿ ಎಳೆಯುತ್ತಾ ಹಂಟುತ್ತ ಕೂತಿದ್ದರು ಅವರು. ನನ್ನ ಜೊತೆ ಬಂದಿದ್ದ ಕಾಮ್ರೇಡ್ ಅವರಿಗೆ ನಾನು ಕರ್ನಾಟಕದಿಂದ ಬಂದಿರುವ ವಿಷಯ ತಿಳಿಸಿದರು. ಅವರು ಆಸಕ್ತಿಯಿಂದ ಕರ್ನಾಟಕದ ರಾಜಕೀಯದ ಬಗ್ಗೆ ಪ್ರಶ್ನೆ ಮಾಡತೊಡಗಿದರು. ನನ್ನ ಜೊತೆಗಿದ್ದ ಕಾಮ್ರೇಡ್ ಅವರ ಮೊದಲ ಪ್ರಶ್ನೆಯನ್ನು ನನಗೆ ಭಾಷಾಂತರ ಮಾಡಿ ತಿಳಿಸಿದಾಗ ನಾನು ಬೆರಗಾಗಿಹೋದೆ. ಎಲ್ಲ ಊರಿನ ಎಲ್ಲ ಡ್ರೈವರ್‌ಗಳಂತಿದ್ದ ಅವರ ಪ್ರಶ್ನೆಗಳು ಮಾತ್ರ ರಾಜಕೀಯದಲ್ಲಿ ಅವರಿಗಿದ್ದ ತೀವ್ರ ಆಸಕ್ತಿಯನ್ನು ತೋರಿಸುತ್ತಿತ್ತು. 'ಕರ್ನಾಟಕದಲ್ಲಿ ಕಳೆದ ವರ್ಷ ನಾವು ಮುನಿಸಿಪಾಲಿಟಿ ಚುನಾವಣೆಯೊಂದರಲ್ಲಿ ಗೆದ್ದ ಬಗ್ಗೆ ಅವರು ಕೇಳುತ್ತಿದ್ದರು. ನನಗೆ, ಎಲ್ಲಿಯ ಅಗರ್ತಲಾ ಎಲ್ಲಿಯ ಧಾಂಡೇಲಿ ಅನ್ನಿಸಿತು. ದೇಶದ ಮತ್ತೊಂದು ಮೂಲೆಯಲ್ಲಿ ಕಾರ್ಮಿಕರ ಪಕ್ಷವೊಂದು ಹೇಗೆ ಬೆಳೆಯುತ್ತಿದೆ ಎಂದು ತಿಳಿಯಲು ಅವರೆಲ್ಲ ಆತುರರಾಗಿದ್ದರು. ಕರ್ನಾಟಕದ ಪಾರ್ಟಿಯ ಬಗ್ಗೆ, ಎಸ್. ಎಫ್. ಐ., ಸಿ. ಐ. ಟಿ. ಯು. ಗಳ ಬಗ್ಗೆ ಪ್ರಶ್ನೆಯ ಸುರಿಮಳೆಯನ್ನೇ ಕರೆದರು. ನಾನು, ನನಗೆ ತಿಳಿದಷ್ಟು ವಿಷಯಗಳನ್ನು ಅವರಿಗೆ ತಿಳಿಸಿದೆ. ನಾನು ಇಂಗ್ಲೀಷಿನಲ್ಲಿ ಹೇಳುತ್ತಿದ್ದುದನ್ನು ಭಾಷಾಂತರದಲ್ಲಿ ಕೇಳಿಸಿಕೊಳ್ಳುತ್ತಿದ್ದರುಅವರು. ಸಾಕಷ್ಟು ಚರ್ಚೆಮಾಡಿ, ಚಾ ತರಿಸಿಕೊಟ್ಟು ಆತ್ಮೀಯತೆಯಿಂದ ಬೀಳ್ಕೊಟ್ಟರು ನನ್ನ ಡ್ರೈವರ್ ಕಾಮ್ರೇಡ್‌ಗಳು.

ಅನೇಕ ರೀತಿಯಲ್ಲಿ ಹಿಂದುಳಿದಿರುವ ತ್ರಿಪುರಾದ ಜನರ ರಾಜಕೀಯ ಪ್ರಜ್ಞೆ ಮಾತ್ರ ಹಿಂದುಳಿದಿಲ್ಲ. ಅಗರ್ತಲಾ ಅಷ್ಟೇ ಅಲ್ಲದೆ ಅದರಿಂದಾಚೆಯ ಹಳ್ಳಿಗಳಲ್ಲಿ, ಹಾಗೂ ಊರುಗಳಲ್ಲಿ ಕೂಡಾ ಈ ಒಂದು ಸತ್ಯ ನನ್ನನ್ನು ಬೆರಗುಗೊಳಿಸುತ್ತಿತ್ತು. ತ್ರಿಪುರಾದ ಹಳ್ಳಿಗಳನ್ನು ನೋಡಬೇಕೆಂದಿದ್ದ ನನ್ನನ್ನು ಪಾರ್ಟಿಯ ಕಾಮ್ರೇಡ್ ಒಬ್ಬರು ಅಗರ್ತಲಾದಿಂದ 25 ಮೈಲಿ ದೂರದಲ್ಲಿರುವ ವಿಶಾಲ್‌ಘರ್ ಎನ್ನುವ ಊರಿಗೆ ಕರೆದೊಯ್ದರು. ನನ್ನನ್ನು ಕರೆದೊಯ್ದ ಕಾಮ್ರೇಡ್ ತ್ರಿಪುರಾ ಅಸೆಂಬ್ಲಿಯಲ್ಲಿ ಪಾರ್ಟಿಯ ಎಂ. ಎಲ್. ಎ. 25ನೆಯ ವಯಸ್ಸಿಗೇ ಚುನಾವಣೆಗೆ ನಿಂತು ಜಯಗಳಿಸಿ ಬಂದ ಯುವಕ. ಆತನ ಮನೆಯಲ್ಲಿ ಆತನ ಅರವತ್ತು ವಯಸ್ಸಿನ ತಾಯಿ ಹಾಗೂ ಆತನ ಅತ್ತಿಗೆ ಇಬ್ಬರೂ ಪಕ್ಷದ ಹಿತೈಷಿಗಳು. ಅವರಿಬ್ಬರೂ ಮಹಿಳಾ ಸಂಘಟನೆಯಲ್ಲಿದ್ದಾರೆ. ತ್ರಿಪುರಾದ ಮಹಿಳಾ ಸಂಘಟನೆ ಹಳ್ಳಿಗಳಲ್ಲಿ ತುಂಬ ಬಲವಾಗಿದೆ. ಮುಸ್ಲಿಂ ಮಹಿಳೆಯರು, ಆದಿವಾಸಿ ಮಹಿಳೆಯರು ಕೂಡಾ ತುಂಬ ಸಂಖ್ಯೆಯಲ್ಲಿ ಸಂಘಟನೆಯ ಸದಸ್ಯರಾಗಿದ್ದಾರೆ.

ಇಡೀ ದಿನ ವಿಶಾಲ್‌ಘರ್ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಸುತ್ತಿದ ನಾವು ಸಂಜೆ ವಿಶಾಲ್‌ಘರ್‌ಗೆ ಹಿಂದಿರುಗಿದಾಗ ಅಲ್ಲಿ ನನಗೊಂದು ಆಶ್ಚರ್ಯ ಕಾದಿತ್ತು. ಅಲ್ಲಿನ ಸಾಂಸ್ಕೃತಿಕ ತಂಡದ ಹುಡುಗಿಯರು ಕ್ರಾಂತಿ ಗೀತೆಗಳನ್ನು ಹಾಡುವವರಿದ್ದರು ವಿಶಾಲ್‌ಘರ್‌ನ ಪಾರ್ಟಿ ಆಫೀಸಿನ ಹತ್ತಿರ ಇದ್ದ ಒಬ್ಬರ ಮನೆಗೆ ನಾವೆಲ್ಲ ಹೋದೆವು. ಅಲ್ಲಿಗೆ ನನ್ನ ಎಂ. ಎಲ್. ಎ. ಸ್ನೇಹಿತನ ತಾಯಿ ಹಾಗೂ ಅತ್ತಿಗೆ ಬಂದು ಕೂತಿದ್ದರು. ಅವರಲ್ಲದೆ ಮತ್ತೆ ನಾಲ್ಕೈದು ಹುಡುಗಿಯರು ಅಲ್ಲಿ ನೆರೆದಿದ್ದರು. ತೀರ ಸರಳವಾದ ಬೊಂಬಿನಿಂದ ನೇಯ್ದ ಮನೆ ಅದು. ತುಂಬ ಅಚ್ಚುಕಟ್ಟಾಗಿದ್ದ ಆ ಮನೆಯ ಗೋಡೆಯ ಮೇಲೆ ಒಂದು ಕಡೆ ಸ್ಟಾಲಿನ್ ಫೋಟೋ ತೂಗಾಡುತ್ತಿತ್ತು. ರೂಮಿನ ಮತ್ತೊಂದು ಕಡೆ, ಮನೆಯವರೇ ಯಾರೋ ಬರೆದದ್ದು ಎಂದು ಕಾಣುತ್ತದೆ, ಹೋ. ಚಿ. ಮಿನ್ಹ ಅವರ ರೇಖಾ ಚಿತ್ರಕಾಣುತ್ತಿತ್ತು. ಹೋ. ಚಿ. ಮಿನ್ಹ ಅವರ ಮೇಕೆ ಗಡ್ಡದಿಂದ ಮಾತ್ರ ಅದು ಅವರದ್ದೆಂದು ಗುರುತು ಹಿಡಿಯಬಹುದಾಗಿತ್ತು. ರೂಮಿನ ಒಂದು ಕಡೆ ಚಾಪೆ ಹಾಸಿ ಅದರ ಮೇಲೆ ಒಂದು ಹಾರ್ಮೋನಿಯಂ ಇಟ್ಟಿದ್ದರು. ಪರಸ್ಪರ ಪರಿಚಯ ಮುಗಿದ ಮೇಲೆ ಹಾರ್ಮೋನಿಯಂ ಹಿಂದೆ ಹೋಗಿ ಕೂತ ಆ ಹುಡುಗಿಯರು ಗಟ್ಟಿಧ್ವನಿಯಲ್ಲಿ ಕ್ರಾಂತಿಗೀತೆಗಳನ್ನು ಹಾಡತೊಡಗಿದರು. ನಾಚುತ್ತಾ ತಲೆತಗ್ಗಿಸಿ ಕೂತು ಸೆರಗಿನ ತುದಿಯನ್ನು ತಿರುಚುತ್ತಾ ಹಾಡುವ ನಾಜೂಕಾದ ಗೀತೆಗಳಲ್ಲ ಅವು. 'ಶೋಷಣಾರಹಿತ ಸಮಾಜವನ್ನು ಸೃಷ್ಟಿಸುತ್ತೇವೆ...' ಎಂದು ಧೈರ್ಯವಾಗಿ, ಸ್ಪಷ್ಟವಾಗಿ ಹಾಡುತ್ತಿದ್ದ ಆ ಹುಡುಗಿಯರಲ್ಲಿ ವ್ಯವಸ್ಥೆಯನ್ನು ಬದಲಿಸಬಲ್ಲ ಎರಡು ಅಂಶ ಕಂಡೆ. ಹಾಡುತ್ತಿದ್ದವರು ಹುಡುಗಿಯರು, ಅವರು ನಾಚುತ್ತಾ, ಬೂರ್ಜ್ವಾ ಕವಿಗಳ ರೀತಿಯಲ್ಲಿ ಹೇಳುವುದಾದರೆ 'ಹೆಣ್ತನವನ್ನು ತುಳುಕಿಸುತ್ತಾ' ಅಲ್ಲ, ಬದಲಿಗೆ ಧಿಟ್ಟ ಹೋರಾಟಗಾತಿಯರಂತೆ ಹಾಡುತ್ತಿದ್ದರು. ಫೆಮಿನಿಸ್ಟ್ ಚಳುವಳಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಎಷ್ಟೋಂದು ಬ್ರಾಗಳನ್ನು ಕಿತ್ತೆಸೆದರೂ ಸಾಧ್ಯವಾಗದ್ದನ್ನು ಈ ಹೆಣ್ಣುಮಕ್ಕಳು ತಮ್ಮ ಪುಟ್ಟ ಹಳ್ಳಿಯ ಮೂಲೆಯಲ್ಲಿ ಸಾಧಿಸ ಹೊರಟಿದ್ದರು. ನಾನು ಈ ಮಾತನ್ನು ಹೇಳುವಾಗ ತ್ರಿಪುರಾದಲ್ಲಿ ಎಲ್ಲ ಸರಿಹೋಗಿಬಿಟ್ಟಿದೆ, ಹೆಣ್ಣುಗಂಡುಗಳ ನಡುವಿನ ಸಾಮಾಜಿಕ ತಾರತಮ್ಯ ಮಾಯವಾಗಿಬಿಟ್ಟಿದೆ ಎಂದು ಕಲ್ಪಿಸಿ ಹೇಳುತ್ತಿಲ್ಲ. ಆದರೆ ಅಂತಹ ಬದಲಾವಣೆಯನ್ನು ತರಲು ಬೇಕಾಗುವ ಸಂಘಟನೆಯೊಂದು ಅಲ್ಲಿ ಮಾರ್ಕ್ಸ್‌ವಾದಿಗಳ ನೇತೃತ್ವದಲ್ಲಿ ಹುಟ್ಟಿದೆ ಎಂದು ಮಾತ್ರ ಹೇಳಬಲ್ಲೆ.

ನಾನು ತ್ರಿಪುರಾದಲ್ಲಿದ್ದಷ್ಟು ದಿನ ನನ್ನನ್ನು ಬೆರಗುಗೊಳಿಸಿದ ಇಂತಹ ಘಟನೆಗಳ ಸರಮಾಲೆಯೇ ಘಟಿಸಿತು ಎನ್ನಬಹುದು. ಅವರ ಪುಟ್ಟರಾಜ್ಯದಲ್ಲಿ ನಡೆದಿರುವ 'ಬೃಹತ್ ಕೆಲಸವನ್ನು ನೋಡುತ್ತಾ ನಡೆದಿದ್ದ ನನಗೆ ಎಲ್ಲ ಕಡೆಯೂ ಒಂದು ಪ್ರಶ್ನೆ ಎದುರಾಗುತ್ತಿತ್ತು. ಅವರೆಲ್ಲಾ ತುಂಬ ಕಳಕಳಿಯಿಂದ ಕರ್ನಾಟಕದಲ್ಲಿ ಕ್ರಾಂತಿಕಾರಿ ಚಳುವಳಿ ಹೇಗಿದೆ? ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಷ್ಟು ಶಕ್ತವಾಗಿದೆ?' ಎಂದು ಪ್ರಶ್ನೆ ಹಾಕುತ್ತಿದ್ದರು. 'ನಮ್ಮದು ಬೆಳೆಯುತ್ತಿರುವ ಪಕ್ಷ. ಇನ್ನು ಒಂದೆರಡು ವರ್ಷಗಳಲ್ಲಿ ನೋಡುತ್ತಿರಿ, ನಾವು ಕರ್ನಾಟಕದ ಇತಿಹಾಸವನ್ನೇ ಬದಲಾಯಿಸುತ್ತೇವೆ' ಎಂದು ನಾನು ಉತ್ತರಿಸುತ್ತಿದ್ದೆ. ಹಾಗೆ ಉತ್ತರಿಸಿದ ನಂತರ ನನ್ನ ಮಾತಿನಲ್ಲಿ ಉತ್ಪ್ರೇಕ್ಷೆ ಇತ್ತೆ ಎಂದೂ ನನ್ನನ್ನು ನಾನು ಪ್ರಶ್ನಿಸಿಕೊಳ್ಳುತ್ತಿದ್ದೆ. ತ್ರಿಪುರಾ ಪ್ರವಾಸ ಮುಗಿಸಿ ಬಂದು ನಮ್ಮ ರಾಜ್ಯವನ್ನು ಮತ್ತೊಮ್ಮೆ ನೋಡಿದಾಗ, ಇಲ್ಲಿ ಆರಂಭವಾಗಿರುವ ಅನೇಕ ಹೋರಾಟಗಳನ್ನು ಕಂಡಾಗ ನನ್ನ ಮಾತು ಉತ್ಪ್ರೇಕ್ಷೆಯಲ್ಲ ಅನ್ನಿಸಿತು.

ಮಾರ್ಚ್ 25, 1980

(ಮುಗಿಯಿತು)

○

ಜನತೆಯನ್ನು ಹೋರಾಟಕ್ಕೆ ಅಣಿಗೊಳಿಸಲು ಕೇಂದ್ರ ಸಮಿತಿ ಕರೆ

(ಕಳೆದ ಸಂಚಿಕೆಯಿಂದ)

ಹಲ್ಲೆಗಳು ಮತ್ತು ದಂಗೆಗಳು :

ರಾಷ್ಟ್ರೀಯ ಐಕ್ಯತಾ ಸಮಿತಿಯನ್ನು ಪುನಃ ಚಟುವಟಿಕೆಗೊಳಪಡಿಸುವುದರ ಬಗ್ಗೆ ಪ್ರಧಾನಮಂತ್ರಿ ಕೊಟ್ಟಿರುವ ಹೇಳಿಕೆಯನ್ನು ಕೇಂದ್ರಸಮಿತಿ ಗಮನಿಸುತ್ತದೆ. ಪಿಪ್ರಾ, ಪರಸ್‌ಬಿಘಾ, ನಾರಾಯಣಪುರಗಳಲ್ಲಿಯಂತೆ ಹರಿಜನರು ಮತ್ತು ದುರ್ಬಲ ವರ್ಗಗಳ ಮೇಲಿನ ಹಲ್ಲೆ ಮುಂದುವರೆಯುತ್ತಿದೆ. ಬಿಹಾರದಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಯುತ್ತಿದೆ. ಇಂಥ ಹಲ್ಲೆಗಳು ಮತ್ತು ಆಲಿಘರ್ ಮತ್ತು ಜಂಷೆಡ್‌ಪುರಗಳಲ್ಲಿನ ಮತೀಯ ಕಲಹಗಳನ್ನು ನಿಲ್ಲಿಸಬೇಕಾದರೆ, ಪರಿಣಾಮಕಾರಿಯಾದ ಕಾರ್ಯಾಚರಣೆ ಮತ್ತು ಅವುಗಳು ಹತ್ತಿಕೊಂಡ ಕೂಡಲೇ ಆರಿಸುವಂತ ಶೀಘ್ರ ಚಲನೆಬೇಕು. ಕಾರ್ಯದಲ್ಲಿ ಏನೂ ಜಾರಿಗೊಳಿಸದೆ, ಇನ್ನೂ ಚರ್ಚೆಗಳಲ್ಲೇ ಇರುವ ಮಾತಾದ ರಾಷ್ಟ್ರೀಯ ಐಕ್ಯತಾ ಸಮಿತಿಯನ್ನು ಸೇರಿಸುವುದರಿಂದ ಯಾವುದೇ ಪರಿಣಾಮ ಆಗುವುದಿಲ್ಲ. ಜನತೆಯನ್ನು ಜಾತಿ ದಬ್ಬಾಳಿಕೆ ಮತ್ತು ಮತೀಯತೆಯ ವಿರುದ್ಧ ಎಚ್ಚರಗೊಳಿಸದಿದ್ದರೆ, ಕೃಷಿ ಕೆಲಸಗಾರರಿಗೆ ಕನಿಷ್ಠ ವೇತನ ನೀಡುವುದನ್ನು ಸರ್ಕಾರ ಕ್ರಮಗೊಳಿಸದಿದ್ದರೆ ಮತ್ತು ರಾಜಕೀಯ ಕಾರಣಗಳಿಗಾಗಿ ಧರ್ಮವನ್ನು ಶೋಷಿಸುವುದನ್ನು ನಿಲ್ಲಿಸದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ ಎಂದೂ ಕೇಂದ್ರಸಮಿತಿ ಹೇಳುತ್ತದೆ.

ಅಮೆರಿಕಾ ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ಚಟುವಟಿಕೆಗಳಿಂದ ದೇಶಕ್ಕೆ ಗಂಭೀರ ಅಪಾಯಗಳು ಇವೆ ಎಂಬುದನ್ನು ಗಮನಕ್ಕೆ ತರಲು ಕೇಂದ್ರಸಮಿತಿ ಇಚ್ಛಿಸುತ್ತದೆ. ಆಫ್ಘಾನಿಸ್ತಾನಕ್ಕೆ ಸೋವಿಯತ್ ನೆರವು ಬಂದು ಅಮೆರಿಕಾದ ಯೋಜನೆಗಳು ತಲೆಕೆಳಗಾದ್ದರಿಂದ ಅಮೆರಿಕಾ ನಾಯಕರು ಪಾಕಿಸ್ತಾನಕ್ಕೆ ವಿಪರೀತ ಆಯುಧ ಸರಬರಾಜು ಮಾಡಲು ಸಂಚುಮಾಡಿದ್ದಾರೆ. ಈ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ, ಭಾರತ ಸರ್ಕಾರವು ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು ಖಂಡಿಸಿ, ಅಲಿಪ್ತತೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ಉಗ್ರವಾಗಿ ಪಾಲಿಸಬೇಕು ಎಂದು ಕೇಂದ್ರಸಮಿತಿ ಅಭಿಪ್ರಾಯ ಪಡುತ್ತದೆ.

ಅತಿ ವಿಶಾಲ ತಳಹದಿಯ ಒಗ್ಗೂಡಿಸುವಿಕೆ :

ಕಾಂಗ್ರೆಸ್ (ಐ) ನಾಯಕರು ತಮ್ಮ ಪಕ್ಷ ಬಿಟ್ಟು ಬೇರೆಯ ರಾಜಕೀಯ ಪಕ್ಷಗಳು ಅದರಲ್ಲೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಮತ್ತು ಅವುಗಳ ರಾಜ್ಯ ಸರ್ಕಾರಗಳ ಬಗ್ಗೆ ದುಷ್ಟ ಧೋರಣೆ ತಳೆದರೆ ಈ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ರಾಜ್ಯ ಸರ್ಕಾರಗಳ ಮೇಲೆ ಒರಟು ಒತ್ತಡ ಹೇರುವ "ಬಲಿಷ್ಠ ಕೇಂದ್ರ ಸರ್ಕಾರ"ದ ಕಲ್ಪನೆಯಿಂದಲೂ ಸಮಸ್ಯೆ ನೀಗುವುದಿಲ್ಲ.

ಸರ್ವಾಧಿಕಾರ ಆಳ್ವಿಕೆಯನ್ನು ಪುನಃ ಸ್ಥಾಪಿಸುವ ಪ್ರಯತ್ನಗಳನ್ನು ತಡೆಯಲು, ರಾಜ್ಯಗಳ ಅಧಿಕಾರಗಳನ್ನು ರಕ್ಷಿಸಿ, ಅವುಗಳ ಸ್ವಾಯತ್ತತೆಗಾಗಿ ಹೋರಾಡಲು, ಪ. ಬಂಗಾಳ, ಕೇರಳ ಮತ್ತು ತ್ರಿಪುರಾಗಳ ಎಡ ಪಂಥೀಯ ಸರ್ಕಾರಗಳನ್ನು ಕಾಪಾಡಲು, ಬೆಲೆಗಳು ಏರುವುದನ್ನು ತಡೆಯಲು, ಅಗತ್ಯವಸ್ತುಗಳ ಅಭಾವ ನೀಗಲು, ಮತ್ತು ಜನತೆಯ ವಿವಿಧ ರಾಜಕೀಯ ಆರ್ಥಿಕ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು, ಅತಿ ವಿಶಾಲ ತಳಹದಿಯ ಸಾಮೂಹಿಕ ಹೋರಾಟವನ್ನು ಬೆಳೆಸುವುದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ತುರ್ತು ಕರ್ತವ್ಯವಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಯು ಎತ್ತಿ ಹಿಡಿಯುವ ನೀತಿಗಳು ಮತ್ತು ಬೇಡಿಕೆಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಸರಿಯಾಗಿ ಮೂಡಿಸಲು, ಸಮ್ಮೇಳನಗಳು, ಸಂಕಿರಣಗಳು, ಅಧಿವೇಶನಗಳು, ಪ್ರದರ್ಶನಗಳನ್ನು ಇತರ ಪ್ರಜಾಪ್ರಭುತ್ವವಾದಿ ಪಕ್ಷಗಳ ಜೊತೆಗೂಡಿ ನಡೆಸಿ, ಇಂಥ ವಿಶಾಲ ತಳಹದಿಯ ಐಕ್ಯತೆ ಮತ್ತು ಹೋರಾಟದ ತುರ್ತನ್ನು ಅರಿತುಕೊಳ್ಳಬೇಕೆಂದು ಕೇಂದ್ರ ಸಮಿತಿಯು ಪಕ್ಷದ ಎಲ್ಲ ಘಟಕಗಳು ಮತ್ತು ಸದಸ್ಯರಿಗೆ ಕರೆನೀಡುತ್ತದೆ.

(ಮುಗಿಯಿತು)

●

ಪುರಸಭೆಯ ನೀತಿಯ ಬಗ್ಗೆ ವಿಷಾದ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಂಟ್ವಾಳ ತಾಲ್ಲೂಕು ಸಮಿತಿಯ ಸಭೆಯು ತಾ. 22-2-1980 ರಂದು ಕಾಂ. ಬಿ. ಮಂಜುನಾಥ್ ಸಪಲಿಯರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ಬಿ. ನಾರಾಯಣರು ಪಕ್ಷದ ಚಟುವಟಿಕೆಗಳ ವರದಿಯನ್ನಿತ್ತರು.

ಬಂಟ್ವಾಳ ಪುರಸಭೆಯ ಪ್ರದೇಶಗಳಾದ ಬಂಟ್ವಾಳ ಮತ್ತು ಪಾಣೆಮಂಗಳೂರಲ್ಲಿ, ಹುಚ್ಚುನಾಯಿಗಳು ಕಚ್ಚಿ ಸಾವನ್ನಪ್ಪಿದ ಬಗ್ಗೆ, ಪಕ್ಷದ ತಾಲ್ಲೂಕು ಸಮಿತಿಯು ವಿಷಾದವನ್ನು ವ್ಯಕ್ತಪಡಿಸುತ್ತದೆಯಲ್ಲದೆ, ಪ್ರಾಣವನ್ನು ಕಳಕೊಂಡವರ ಕುಟುಂಬಿಕರಿಗೆ ಪರಿಹಾರವನ್ನು ಒದಗಿಸಬೇಕೆಂದೂ, ಹುಚ್ಚು ನಾಯಿಗಳ ಹಾವಳಿಯಿಂದ, ಜನರನ್ನು ರಕ್ಷಿಸಬೇಕೆಂದೂ, ಬಂಟ್ವಾಳ ಪುರಸಭೆ ಮತ್ತು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಂಡಿತು. ●

ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಕ್ರಮಣದ ಖಂಡನೆ

ಬೆಳಗಾವಿ ನಗರದಲ್ಲಿ ಮಾರ್ಕೆಟ್ ಯಾರ್ಡಿನಲ್ಲಿರುವ ದೇವಸ್ಥಾನವನ್ನು, ಜನರ ಪ್ರತಿಭಟನೆಯನ್ನೂ ಗಣನೆಗೆ ತೆಗೆದುಕೊಳ್ಳದೆ, ಬುಲ್‌ಡೋಜರ್ ತೆಗೆದುಕೊಂಡು ಹೋಗಿ ನಾಶಪಡಿರುವುದನ್ನು ಬೆಳಗಾವಿಯ ಸಿ. ಐ. ಟಿ. ಯು. ಖಂಡಿಸಿದೆ. 19-3-80 ರಂದು ಪುರಸಭೆಯ ಅಧಿಕಾರಿಯು ತೆಗೆದುಕೊಂಡ ಈ ಕ್ರಮವು ತಮಗೆ ಬೇಕಾದ ಧರ್ಮವನ್ನು ಅನುಸರಿಸಲು ಜನತೆಗಿರುವ ಮೂಲಭೂತ ಹಕ್ಕಿಗೆ ಕೊಡಲಿ ಏಟು ಹಾಕಿದೆ ಎಂದಿರುವ ಸಿ. ಐ. ಟಿ. ಯು. ಸರಕಾರವು ಕೂಡಲೇ ದುರಾಕ್ರಮಣದ ಬಗ್ಗೆ ಕ್ರಮ ವಹಿಸಲು ಒತ್ತಾಯಿಸಿದೆ. ●

ದುರಂತ ತಪ್ಪಿಸಲು ದಯವಿಟ್ಟು ಒಂದಾಗಿ

(ಒಂದನೇ ಪುಟದಿಂದ)

ಸುಭದ್ರ ಸರ್ಕಾರ:

ದೇಶಕ್ಕೆ ಸುಭದ್ರ ಸರ್ಕಾರ ಕೊಡುತ್ತೇವೆ ಎಂದು ಅಬ್ಬರದ ಪ್ರಚಾರ ಮಾಡಿಕೊಂಡು ಅಧಿಕಾರಕ್ಕೇರಿದ ಇಂದಿರಾಗಾಂಧಿಯವರು ಇನ್ನೂ ತಮ್ಮ ಮಂತ್ರಿಮಂಡಲವನ್ನೇ ಪೂರ್ತಿಗೊಳಿಸಲಿಕ್ಕೆ ಶಕ್ಯವಾಗಿಲ್ಲ ಎಂದು ಗೇಲಿ ಮಾಡಿದ ಮಾರ್ಕ್ಸ್‌ವಾದಿ ನಾಯಕರು ಇತ್ತೀಚೆಗೆ ವಿಸರ್ಜನೆಯಾದ 9 ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯುವ ಮೊದಲೇ ಮುಂದಿನ ಮುಖ್ಯಮಂತ್ರಿ ಪಟ್ಟಕ್ಕಾಗಿ ಕಾಂಗ್ರೆಸ್‌ನಲ್ಲಿ ಒಳಜಗಳ ಪ್ರಾರಂಭವಾಗಿದೆ ಎಂದರು. ಇದಕ್ಕೆ ವಿರುದ್ಧವಾಗಿ ಪ. ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಸುಭದ್ರ ಹಾಗೂ ದಕ್ಷ ಸರ್ಕಾರಗಳ ಕಡೆಗೆ ಇ. ಎಂ. ಎಸ್. ಸಭಿಕರ ಗಮನ ಸೆಳೆದರು.

ಕಾಂಗ್ರೆಸ್ ಕಿತ್ತೆಸೆಯುತ್ತೇವೆ:

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿ. ಪಿ. ಐ. (ಎಂ.)ನ ರಾಜ್ಯ ಶಾಖೆಯ ಅಧ್ಯಕ್ಷ ಕಾಂ. ಎಂ. ಕೆ. ಭಟ್ ಅವರು ಮಾತನಾಡಿ ಪ. ಬಂಗಾಳ ಸರ್ಕಾರವನ್ನು ಬಂಗಾಳ ಕೊಲ್ಲಿಗೆ ಕಿತ್ತೆಸೆಯುವವರೆಗೆ ವಿರಮಿಸುವುದಿಲ್ಲ ಎಂಬ ಕೇಂದ್ರ ಮಂತ್ರಿ ಘನಿಖಾನ್‌ಚೌದರಿ ಹಾಗೂ ಕೇರಳ ಸರ್ಕಾರವನ್ನು ವಜಾ ಮಾಡುತ್ತೇವೆ ಎಂದು ಬೆದರಿಸುವ ಮತ್ತೊಬ್ಬ ಕೇಂದ್ರ ಮಂತ್ರಿ ಸ್ಟೀಫನ್‌ರನ್ನು ಖಂಡಿಸಿದರು. ಬಂಡವಾಳಗಾರರ ಮತ್ತು ದೊಡ್ಡ ಜಮೀನುದಾರರ ಹಿತ ರಕ್ಷಿಸಿಕೊಂಡು ಬರುತ್ತಿರುವ ಕಾಂಗ್ರೆಸ್ ಸರ್ಕಾರವನ್ನು ದಿಲ್ಲಿಯಿಂದ ಕಿತ್ತೆಸೆಯುವವರೆಗೆ ನಾವೂ ಸಹ ವಿರಮಿಸುವುದಿಲ್ಲ ಎಂದು ಕಾಂ. ಭಟ್ ಘೋಷಿಸಿದರು. ರಾಜ್ಯದ ಜನತೆಯಿಂದ ಮತ ಪಡೆದು ಆಯ್ಕೆಯಾದ ಶಾಸಕರು ಮತ್ತು ಲೋಕಸಭಾ ಸದಸ್ಯರು ಜನಸೇವೆಗೆ ಬದಲಾಗಿ ಅಧಿಕಾರಕ್ಕೆ ಅಂಟಿಕೊಂಡಿರಲು ಒದ್ದಾಡುತ್ತಿದ್ದಾರೆಂದು ರಾಜ್ಯ ಕಾರ್ಯದರ್ಶಿಗಳು ಆಪಾದಿಸಿದರು. ಆಳುವ ಸರ್ಕಾರ ಅನುಸರಿಸಿಕೊಂಡು ಬರುತ್ತಿರುವ ಆರ್ಥಿಕ ನೀತಿಗಳೇ ಬೆಲೆಏರಿಕೆಗೆ ಕಾರಣ ಎಂದ ಕಾಂ. ಭಟ್, ಪರ್ಯಾಯ ಆರ್ಥಿಕ ನೀತಿಗಳೇ ಸಮಸ್ಯೆಗೆ ಪರಿಹಾರ ಎಂದರು.

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯ ಕಾಂ. ಟಿ. ಎಸ್. ಅನಂತರಾವ್ ಸ್ವಾಗತಿಸಿದರು. ಸಭೆಯ ಪ್ರಾರಂಭದಲ್ಲಿ ಅನೇಕ ಸಂಘ ಸಂಸ್ಥೆಗಳವರು ಕಾಂ. ಇ. ಎಂ. ಎಸ್. ರಿಗೆ ನೋಟಿನ ಹಾಗೂ ಹೂಹಾರಗಳನ್ನು ಅರ್ಪಿಸಿದರು. ಸಭೆ ಶುರುವಾದ ಸ್ವಲ್ಪ ಹೊತ್ತಿನಲ್ಲೇ ಮಳೆಯು ಇ.ಎಂ.ಎಸ್. ಸಭೆಗೆ ಅಡ್ಡಿಯುಂಟುಮಾಡಿತು. ಕಾಂ. ಇ.ಎಂ.ಎಸ್. ರ ಇಂಗ್ಲೀಷ್ ಭಾಷಣವನ್ನು ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಕನ್ನಡಕ್ಕೆ ಅನುವಾದಿಸಿದರು.

○

....ಅಖಿಲ ಭಾರತ ದಿನಾಚರಣೆಗೆ ಸಿ ಐ ಟಿ ಯು ಕರೆ

(ಒಂದನೇ ಪುಟದಿಂದ)

ಪೋಲೀಸರು ಮತ್ತು ಪಟ್ಟಭದ್ರ ಹಿತಗಳ ಗೂಂಡಾಗಳು ಮಹಿಳೆಯರ ಮೇಲೆ, ಅದರಲ್ಲೂ ಮುಖ್ಯವಾಗಿ ಹರಿಜನ ಮಹಿಳೆಯರ ಮೇಲೆ ನಡೆಸುತ್ತಿರುವ ಅತ್ಯಾಚಾರ, ಮಾನಭಂಗಗಳು ಹೆಚ್ಚುತ್ತಿರುವುದರ ಬಗ್ಗೆ ಸಭೆಯು ಕಳವಳವನ್ನು ವ್ಯಕ್ತಪಡಿಸಿತು. ಅತ್ಯಾಚಾರಕ್ಕೊಳಗಾದವರ ಬಗ್ಗೆ ಮೊಸಳೆ ಕಣ್ಣೀರನ್ನು ಸುರಿಸಿ, ಇಂತಹ ಅಪರಾಧಗಳನ್ನೆಸಗುವ ಪಟ್ಟಭದ್ರ ಹಿತಗಳ ವಿರೋಧ ಕಟ್ಟಿಕೊಳ್ಳಲು ಒಲ್ಲದೆ ಅತ್ಯಾಚಾರಿಗಳ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳದ ಭಾರತ ಸರ್ಕಾರದ ನೀತಿಯನ್ನು ಸಭೆಯು ಟೀಕಿಸಿತು. ಈ ದುಷ್ಕೃತ್ಯಗಳ ವಿರುದ್ಧ ಹೋರಾಡಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸಭೆಯು ಮನವಿ ಮಾಡಿತು.

ಸಾಕಷ್ಟು ಆರ್ಥಿಕ ಬೆಳವಣಿಗೆ ಇಲ್ಲದೆ ನಿರುದ್ಯೋಗ ಸಮಸ್ಯೆಯು ತೀವ್ರವಾಗಿರುವ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಅಸ್ಸಾಮಿನಲ್ಲಿ ಇಂದಿನ ವಿಚ್ಛಿದ್ರಕಾರಿ ಪರಿಸ್ಥಿತಿಯನ್ನುಂಟುಮಾಡಿರುವ ವಿದೇಶಿ ಸಂಸ್ಥೆಗಳು ಮತ್ತು ಆರ್.ಎಸ್.ಎಸ್‌ನ್ನು ದೂರಿದ ಸಭೆಯು ಅಸ್ಸಾಮಿನ ಪರಿಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿತು. ಎಲ್ಲಾ ಪಕ್ಷಗಳೂ ಒಪ್ಪಿರುವ ವಿದೇಶೀಯರ ಸಮಸ್ಯೆಯನ್ನು ಬಗೆಹರಿಸಲು 1971ನ್ನು ಆಧಾರವಾಗಿ ಪರಿಗಣಿಸಿ ಎಲ್ಲಾ ಪ್ರಶ್ನೆಗಳನ್ನೂ ಇತ್ಯರ್ಥಮಾಡಬೇಕೆಂದು ಸಭೆಯು ಒತ್ತಾಯಪಡಿಸಿತು.

ಗಗನಕ್ಕೇರುತ್ತಿರುವ ಬೆಲೆಗಳು, ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ,- ಇವುಗಳನ್ನು ಸಭೆಯು ಪರಿಗಣಿಸಿತು. ನಮ್ಮ ಆರ್ಥಿಕ ಸ್ವಾತಂತ್ರ್ಯಕ್ಕೆ ಗಂಭೀರ ಅಪಾಯವನ್ನೊಡ್ಡುವ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಸರ್ಕಾರಿ ವಕ್ತಾರರು ಸ್ವಾಗತಿಸಿ ಕೊಟ್ಟಿರುವ ಹೇಳಿಕೆಗಳನ್ನು ಸಭೆಯು ಟೀಕಿಸಿತು.

ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯು ಮತ್ತೂ ಹದಗೆಡುವುದರ ಮೊದಲೇ ಕಾರ್ಮಿಕರನ್ನು ಒಗ್ಗಟ್ಟು ಮಾಡುವ ಅಗತ್ಯವನ್ನು ಸಭೆಯು ಪುನರುಚ್ಚರಿಸಿತು. ಕೇಂದ್ರ ಕಾರ್ಮಿಕ ಸಂಘಗಳ ಮತ್ತು ರಾಷ್ಟ್ರೀಯ ಮಹಾಮಂಡಳಗಳ ಒಂದು ಕಾನ್‌ಫೆಡರೇಷನ್ನನ್ನು ರಚಿಸುವ ಅಗತ್ಯವನ್ನು ಅದು ಒತ್ತಿ ಹೇಳಿತು

ಸಿ. ಐ. ಟಿ. ಯು ವಿನ ಹತ್ತನೆಯ ವರ್ಧಂತಿಯನ್ನು ಮೇ 30 ರಂದು ಆಚರಿಸಿ ಸಿ. ಐ. ಟಿ. ಯು ವಿನ ಸಾಧನೆಗಳನ್ನು ಜನಪ್ರಿಯಗೊಳಿಸಬೇಕೆಂದು ಸಭೆಯು ಎಲ್ಲಾ ಸಿ. ಐ. ಟಿ. ಯು. ಸಂಘಗಳಿಗೆ ಕರೆಕೊಟ್ಟಿದೆ.

○

ಮಹಿಳಾ ವಿಮೋಚನಾ ಸಂಘಟನೆ

ತಾರೀಖು 23-4-1980ರಂದು ಗುಲ್ಬರ್ಗಾನಗರದಲ್ಲಿ ಮಹಿಳಾ ವಿಮೋಚನಾ ಸಂಘಟನೆಯನ್ನು ರಂಗಭೂಮಿಯ ಖ್ಯಾತ ನಿರ್ದೇಶಕ ಪ್ರಸನ್ನ ಉದ್ಘಾಟಿಸಿದರು. "ಮಹಿಳಾ ವಿಮೋಚಕರ ದೃಷ್ಟಿಯಲ್ಲಿ ನಾನು ಶೋಷಕನಾದರೂ, ವಿಮೋಚನಾ ಸಂಘಟನೆಗೂ ನನಗೂ ನಿಕಟ ಸಂಪರ್ಕವಿದೆ" ಎಂದು ತಿಳಿಸಿದ ಪ್ರಸನ್ನರವರು ಮಹಿಳಾ ಸಂಘಟನೆ ಶೋಷಣೆಯ ವಿರುದ್ಧ ಹೋರಾಡುತ್ತಿರುವ ಉಳಿದ ಸಂಘಟನೆಗಳೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕೆಂದರು.

ಬೆಂಗಳೂರಿನ ಪತ್ರಿಕಾಕರ್ತ ಇಕ್ಬಾಲ್ ಹುಸೇನ್‌ರವರು ಮಾತನಾಡಿ ಕಾರ್ಖಾನೆಗಳಲ್ಲಿ, ಜಮೀನುಗಳಲ್ಲಿ, ತನ್ನ ಸ್ವಂತ ಮನೆಯಲ್ಲಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ಶೋಷಣೆಗೊಳಗಾಗುತ್ತಿರುವುದನ್ನು ಉದಾಹರಣೆಗಳಿಂದ ವಿವರಿಸಿ, ಸಂಘಟನೆ ಪ್ರಾರಂಭವಾಗುತ್ತಿರುವುದು ಒಳ್ಳೆಯ ಸೂಚನೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಧ್ಯಾಪಕಿ ಶ್ರೀಮತಿ ಶೈಲಜಾ ಉಡಚಣಿಯವರು ಮಹಿಳೆಯರನ್ನು ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ಸಮಾಜ ಹೇಗೆ ವಂಚಿಸುತ್ತಿದೆ ಎಂಬುದನ್ನು ವಿವರಿಸಿ, ಅವರಿವರಿಗೆ ದೂರುವುದಕ್ಕೆ ಮೊದಲು ನಮ್ಮನ್ನು ನಾವು ಅರಿತುಕೊಳ್ಳಬೇಕೆಂದರು.

ಪ್ರಾರಂಭದಲ್ಲಿ ಸರಳಾ ಪೂಜಾರ್ ಸಂಘಟನೆಯ ಧ್ಯೇಯ, ಧೋರಣೆಗಳನ್ನು ವಿವರಿಸಿದರು. ಶ್ರೀಮತಿ ಶೀಲಾ ಪ್ರತಾಪ್‌ಸಿಂಗ್‌ರವರು ವಿಮೋಚನಾ ಸಂಘಟನೆ ಗುಲ್ಬರ್ಗಾದಲ್ಲಿ ಅಸ್ತಿತ್ವಕ್ಕೆ ಬರಲು ಮಾಡಿದ ಪ್ರಯತ್ನಗಳು, ಮುಂದಿನ ಗುರಿಗಳು ಮುಂತಾದವುಗಳನ್ನು ವಿವರಿಸಿದರು.

ಕೊನೆಯಲ್ಲಿ ಪರೀಘಾರವರು ಸಮಾರಂಭ ಯಶಸ್ವಿಯಾಗುವಂತೆ ಮಾಡಲು ಸಹಕರಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ತಿದ್ದುಪಡಿ

ಪುಟ 5ರಲ್ಲಿ "ಸರ್ಕಾರವೇ ಸರ್ವಸ್ವ ಎಂದು ತಿಳಿದವರು ನಾವಲ್ಲ" ಎಂಬ ಲೇಖನದ ಕಡೆಯ ಪ್ಯಾರದಲ್ಲಿ 1967 ಎಂಬುದನ್ನು 1957 (ಇಸವಿ) ಎಂದು ಓದಿಕೊಳ್ಳಿ.

ಸಂಪಾದಕೀಯ

(ಒಂದನೇ ಪುಟದಿಂದ)

ದರೂ ಪೋಲೀಸರು ಯಾವ ರಕ್ಷಣೆಯನ್ನೂ ಕೊಟ್ಟಿಲ್ಲ. ಇನ್ನೂ ಹಲವಾರು ಕಡೆ ಹರಿಜನರ ಮೇಲೆ ನಾನಾ ವಿಧದ ಅನ್ಯಾಯಗಳು ನಡೆಯುತ್ತಿವೆ. ಕಾರ್ಮಿಕರು ಮುಷ್ಕರ ನಡೆಸಿದ ಸಂದರ್ಭದಲ್ಲಿ ಪೋಲೀಸರು ಮಾಲೀಕರ ಪರವಾಗಿ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುವುದನ್ನು ನಾವು ಸದಾ ನೋಡುತ್ತಿದ್ದೇವೆ. ಈ ಅರಾಜಕತೆ ಕೂಡಲೇ ನಿಲ್ಲಲಿ. ಪೋಲೀಸರ ಈ ವರ್ತನೆಯು ರಾಜ್ಯದ ಆಡಳಿತಕ್ಕೆ ಕಳಂಕ ತರುವಂತದ್ದಾಗಿದೆ. ರಾಜ್ಯದ ಮುಖ್ಯಮಂತ್ರಿಯವರು ಇದರ ಬಗ್ಗೆ ಹೆಚ್ಚು ಗಮನಹರಿಸಿ ಪೋಲೀಸ್ ಇಲಾಖೆಯನ್ನು ಸರಿಯಾದ ದಾರಿಗೆ ತರಲು ಪ್ರಯತ್ನಿಸಲಿ. ಅನಾವಶ್ಯಕ ವಿವಾದಗಳಲ್ಲಿ ಕಾಲಹರಣ ಮಾಡುವುದನ್ನು ನಿಲ್ಲಿಸಲಿ. ಈಗ ನಡೆಯುತ್ತಿರುವ ಪೋಲೀಸರ ದೌರ್ಜನ್ಯಗಳು ನಿಲ್ಲದಿದ್ದಲ್ಲಿ ಅಶಾಂತಿ ಬೆಳೆದೀತೆಂದೂ, ಇದನ್ನು ಪ್ರತಿಭಟಿಸಲು ಜನ ಹೋರಾಡಬೇಕಾಗುವುದೆಂದೂ ನಾವು ಎಚ್ಚರಿಕೆ ಕೊಡುತ್ತೇವೆ. ○

ರಾಯಚೂರಿನಲ್ಲಿ ರಾಜ್ಯಮಟ್ಟದ ಯುವಜನ ಸಮಾವೇಶ

ಕರ್ನಾಟಕ ರಾಜ್ಯದಲ್ಲಿ ಯುವಜನತೆಯನ್ನು ಪ್ರಗತಿಪರ, ವೈಜ್ಞಾನಿಕ ಪಥದಲ್ಲಿ ಕೊಂಡೊಯ್ಯಲು ಮತ್ತು ಯುವಜನತೆಯ ಹೋರಾಟಗಾರ ಸಂಘಟನೆಯೊಂದನ್ನು ಕಟ್ಟುವುದರ ಬಗ್ಗೆ ಚರ್ಚಿಸಿ, ತೀರ್ಮಾನಗಳನ್ನು ತೆಗೆದುಕೊಳ್ಳಲು 1980 ಏಪ್ರಿಲ್ 20, 21, 22 ಮತ್ತು 23 ರಂದು ರಾಯಚೂರಿನಲ್ಲಿ ನಾಲ್ಕು ದಿನಗಳ ಸಮಾವೇಶ ನಡೆಯಲಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಯುವಜನ ಪ್ರತಿನಿಧಿಗಳು ಭಾಗವಹಿಸಲಿರುವ ಈ ಸಮಾವೇಶದಲ್ಲಿ ಯುವಜನತೆಯ ಸಂಘಟನೆ ಮತ್ತು ಸಂಘಟನೆಗಿರುವ ಕಾರ್ಯಕ್ರಮಗಳ ಬಗ್ಗೆಯೂ ಚರ್ಚೆ ನಡೆದು, ಒಂದು ಸಂಘಟನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಕನಿಷ್ಟ ಮೂರು, ಗರಿಷ್ಟ ಐದು ಮಂದಿ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳಲಾಗಿದೆ. ಪ್ರತಿನಿಧಿ ಶುಲ್ಕ ರೂ. 10 ಕೊಡಬೇಕು. ಪ್ರತಿನಿಧಿಗಳು 19-4-80ರ ಸಂಜೆ ಇಲ್ಲವೇ 20-4-80 ರಂದು ಬೆಳಿಗ್ಗೆ 9 ಘಂಟೆ ಒಳಗೆ ರಾಯಚೂರನ್ನು ತಲಪಬೇಕು. 19ರ ಸಂಜೆ ಮತ್ತು 20 ರಂದು ಮಧ್ಯಾಹ್ನದ ತನಕ ರಾಯಚೂರು ಬಸ್ ನಿಲ್ದಾಣದಲ್ಲಿ ಸ್ವಯಂ ಸೇವಕರನ್ನು ಇರಿಸಲಾಗುವುದು.

ಎಷ್ಟು ಮಂದಿ ಪ್ರತಿನಿಧಿಗಳು, ಮತ್ತು ಎಂದು ತಲಪುವರು-ಇತ್ಯಾದಿ ವಿವರಗಳನ್ನು ಈ ಕೆಳಗಿನ ವಿಳಾಸಕ್ಕೆ ತಿಳಿಸಿ.

Chandrashekar, S. Bale
Room No. 2, IMA Building
Old Hospital Compound
R A I C H U R (Karnataka)

ಐಕ್ಯರಂಗ ಏಜೆನ್ಸಿ ಮತ್ತು ಓದುಗರ ಗಮನಕ್ಕೆ

ಹಲವು ಬಾರಿ ನೋಟೀಸು ಕೊಟ್ಟರೂ, ತಿಳಿಸಿದರೂ ಬಹಳಷ್ಟು ಏಜೆಂಟುರುಗಳು ಐಕ್ಯರಂಗದ ಬಿಲ್ಲಿನ ಹಣವನ್ನು ಸರಿಯಾಗಿ ಕಳುಹಿಸುತ್ತಿಲ್ಲ. ಒಂದು ತಿಂಗಳಿನ ಬಿಲ್ಲಿನ ಹಣಕ್ಕಿಂತ ಹೆಚ್ಚಿಗೆ ಬಾಕಿ ಇರುವ ಎಲ್ಲಾ ಏಜೆಂಟರುಗಳಿಗೂ ಮುಂದಿನ ವಾರದಿಂದ ಪತ್ರಿಕೆ ಕಳುಹಿಸಲಾಗುವುದಿಲ್ಲ. ಹಿಂದಿನ ಎಲ್ಲಾ ಬಾಕಿಯನ್ನು ಸಂದಾಯ ಮಾಡಿ, ಪತ್ರಿಕೆಯೊಂದರ ರೂ. 2 ರಂತೆ ಠೇವಣಿ ಹಣವನ್ನು ಕಳುಹಿಸದಿದ್ದಲ್ಲಿ ಮುಂದೆ ಪತ್ರಿಕೆ ಕಳುಹಿಸುವುದು ಅಸಾಧ್ಯ.

ಈ ತೀವ್ರ ಕ್ರಮದಿಂದ ನಮ್ಮ ಓದುಗರಿಗಾಗಬಹುದಾದ ತೊಂದರೆಗಳಿಗಾಗಿ ನಾವು ವಿಷಾದಿಸುತ್ತೇವೆ ಹಾಗೂ ಇದಕ್ಕೆ ಜವಾಬ್ದಾರರು ಏಜೆಂಟರುಗಳೆಂಬುದನ್ನು ತಿಳಿಸಬೇಕಾಗುತ್ತದೆ.

ಎಂ. ಕೆ. ಭಟ್
ಸಂಪಾದಕ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಮಾರ್ಚ್ 28, 29 ಮತ್ತು 30 ರಂದು ಕಾಂ. ಇ. ಎಮ್. ಎಸ್. ನಂಬೂದಿರಿಪಾದರ ಸಮ್ಮುಖದಲ್ಲಿ ನಡೆದು ಪ್ರಚಲಿತ ರಾಜಕೀಯ ಪರಿಸ್ಥಿತಿ, ನಮ್ಮ ಕರ್ತವ್ಯ, ಸಂಘಟನಾ ಕರ್ತವ್ಯಗಳು ಮೊದಲಾದವುಗಳನ್ನು ಚರ್ಚಿಸಿತು. ಪಕ್ಷದ ರಾಜ್ಯಸಮಿತಿ ಕೇಂದ್ರವನ್ನು ಬಲಪಡಿಸಲು, ಹೆಚ್ಚುತ್ತಿರುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದನ್ನು ಸಾಧ್ಯವಾಗುವಂತೆ ಮಾಡಲು ಮತ್ತು ಕೇಂದ್ರ ಸಮಿತಿಯ ಕೆಲಸಗಳನ್ನು ನಡೆಸಲು ಸಹಾಯಮಾಡಲು ಈ ವರ್ಷ ರೂ. 50,000ದ ಕೇಂದ್ರಸಮಿತಿ ಮತ್ತು ರಾಜ್ಯಸಮಿತಿ ನಿಧಿ ಸಂಗ್ರಹಿಸಲು ತೀರ್ಮಾನಿಸಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT